# ಮಾಧ್ಯಮ ಮಂಗಳ

ಸಂಪುಟ: 12 ಸಂಚಿಕೆ: 02 ಮಂಗಳೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ ದಿನಾಂಕ: ಅಕ್ಟೋಬರ್ 10, 2016




ದೇಶದ ಅತ್ಯಂತ ಅಸುರಕ್ಷಿತ ನಗರ ದೆಹಲಿ

ಪುಟ: 2



ಅಲೋಶಿಯಸ್ ಚರ್ಚ್‌ನ ರಮಣೀಯ ಚಿತ್ರ ಕಲೆಗಳು

ಪುಟ: 3



ಕರಾವಳಿಯಲ್ಲಿ ನರ್ತೆ ವಿಶೇಷತೆ

ಪುಟ: 4

# ಶಿಕ್ಷಣ ಸಂಸ್ಥೆಗಳಲ್ಲಿ ಕೋಮುವಾದ ಸಹಿಸಲ್ಲ: ರಾಯರೆಡ್ಡಿ

## 37ನೇ ಸಂಸ್ಥಾಪನಾ ದಿನಾಚರಣೆ

**ಮಂಗಳಗಂಗೋತ್ರಿ:** ಮಂಗಳೂರು ವಿವಿ 100 ವರ್ಷಗಳ ಇತಿಹಾಸವಿರುವ ವಿವಿಗಳಿಗೆ ಸಮಾನಾಂತರವಾಗಿ ಬೆಳೆದಿದೆ. ಆದರೆ ಮತೀಯ ಶಕ್ತಿಗಳು ಇಂತಹ ವಿವಿಯ ಹೆಸರನ್ನು ಕೆಡಿಸುತ್ತಿದ್ದು ಇದನ್ನು ಸಹಿಸಲು ಸಾಧ್ಯವಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಕೋಮು, ಭಾಷೆಯ ಹೆಸರಿನಲ್ಲಿ ಅಹಿತಕರ ಘಟನೆಗಳು ನಡೆದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಶ್ರೀ ಬಸವರಾಜ ರಾಯರೆಡ್ಡಿ ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿಯ ಮಂಗಳಾ ಸಭಾಂಗಣದಲ್ಲಿ ನಡೆದ 37ನೇ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸಿ, ಅಂತರಾಷ್ಟ್ರೀಯ ಭವನಕ್ಕೆ ಶಂಕುಸ್ಥಾಪನೆ ನೇರವೇರಿಸಿ ಅವರು ಮಾತನಾಡುತ್ತಿದ್ದರು.

ಮಂಗಳೂರು ವಿವಿ ಉತ್ತಮ ಗುಣಮಟ್ಟದ ಮತ್ತು ಪರಿಣಾಮಕಾರಿ ಶಿಕ್ಷಣ ನೀಡುವಲ್ಲಿ




ಕರ್ನಾಟಕ ಉನ್ನತ ಶಿಕ್ಷಣ ಸಚಿವ ಶ್ರೀ ಬಸವರಾಜ ರಾಯರೆಡ್ಡಿ ಅವರು ಮಂಗಳೂರು ವಿವಿಯಲ್ಲಿ ಸಂಸ್ಥಾಪನಾ ದಿನಾಚರಣೆ ಭಾಷಣ ಮಾಡುತ್ತಿರುವುದು.

ಯಶಸ್ವಿಯಾಗಿದೆ. ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಇಲ್ಲಿನ ಸಾರ್ವಜನಿಕ ಸೇವೆಯಿಂದ ವಿವಿಯು ಸಂಶೋಧನಾ ಕೇಂದ್ರ ವಿಶ್ವದರ್ಜೆಯನ್ನು ಹೊಂದಿದೆ. ಯಾವುದೇ ಕಾರಣಕ್ಕೂ ಶಿಕ್ಷಣ ಕ್ಷೇತ್ರದಲ್ಲಿ ಮೌಲ್ಯಗಳ ಕುಸಿತವಾಗಬಾರದು. ಗುಣಮಟ್ಟದ ಶಿಕ್ಷಣಕ್ಕೆ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದು ಸಚಿವರು ತಿಳಿಸಿದರು.

ರಾಜ್ಯ ಸರಕಾರ 2016–17ನೇ ಸಾಲಿನಲ್ಲಿ ಶಿಕ್ಷಣಕ್ಕಾಗಿ 25,000ಕೋಟಿ ರೂ. ನೀಡಿದೆ. ದೇಶದಲ್ಲಿ ಉನ್ನತ ಶಿಕ್ಷಣ ಮಾಡುವವರ ಪ್ರಮಾಣ ಕಡಿಮೆಯಿದೆ. ದಕ್ಷಿಣ ಕೊರಿಯ ಅಮೆರಿಕಾ ಹಾಗೂ ಚೀನಾದಲ್ಲಿ ವಿದ್ಯಾರ್ಥಿಗಳು ಪಿಯುಸಿ ನಂತರ ಶಿಕ್ಷಣ ಮುಂದುವರೆಸುತ್ತಿದ್ದಾರೆ. ಆದರೆ ಭಾರತದಲ್ಲಿ ಶೇ.22ರಷ್ಟು ವಿದ್ಯಾರ್ಥಿಗಳು ಪಿಯುಸಿ ನಂತರ ಶಿಕ್ಷಣ ಪಡೆಯುತ್ತಿದ್ದಾರೆ. ಈ ಪ್ರಮಾಣ ಹೆಚ್ಚಾಗಬೇಕಾಗಿದೆ.ರಾಜ್ಯದಲ್ಲಿರುವ 412 ಸರಕಾರಿ ಕಾಲೇಜು, 23 ವಿವಿಗಳಲ್ಲಿ ಶಿಕ್ಷಣ ಅಭಿವೃದ್ಧಿಗೆ ಪ್ರಯತ್ನಿಸಲಾಗುವುದು ಎಂದು ಸಚಿವರು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಉಪನ್ಯಾಸಕರ ಕೊಠಡಿ ಸಂಕೀರ್ಣಕ್ಕೆ ದ.ಕ ಜಿಲ್ಲಾ ಉಸ್ತುವಾರಿ ಸಚಿವ ಬಿ.ರಮಾನಾಥ ರೈ ಅವರು ಶಿಲಾನ್ಯಾಸ ನೇರವೇರಿಸಿದರು.

ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಯು.ಟಿ ಖಾದರ್ ಮಾತನಾಡಿದರು.

ಮಂಗಳೂರು ವಿವಿ ಕುಲಪತಿ ಪ್ರೊ.ಕೆ.ಭೈರಪ್ಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಚಲನಚಿತ್ರ ನಟ ದೇವದಾಸ್ ಕಾಪಿಕಾಡ್ ಹಾಗೂ ಒಲಂಪಿಯನ್ ಸಹನಾ ಕುಮಾರಿಯವರನ್ನು ಸನ್ಮಾನಿಸಲಾಯಿತು.

# ವೇಗದ ಬರವಣಿಗೆ ಹಾಗೂ ತಾಂತ್ರಿಕ ಸಮಗ್ರತೆ ಒಂದು ಸವಾಲು: ಜಿ.ರಘುರಾಮ್




**ಮಂಗಳಗಂಗೋತ್ರಿ:** ಮುದ್ರಣ ಮಾಧ್ಯಮವು ಪತ್ರಕರ್ತರಿಗೆ ಹೊಸ ಸವಾಲು ಇದ್ದಂತೆ. ಪ್ರಸ್ತುತ ಮಾಧ್ಯಮದಲ್ಲಿ ಮುಂದುವರೆಯಲು ಬಯಸುವ ಪತ್ರಿಕೋದ್ಯಮ ವಿದ್ಯಾರ್ಥಿಗಳು ವೇಗವಾದ ಬರವಣಿಗೆ ಹಾಗೂ ತಾಂತ್ರಿಕ ಸಮಗ್ರತೆಯ ಸವಾಲುಗಳನ್ನು ಎದು–ರಿಸಲು ಸಿದ್ಧರಿರಬೇಕು ಎಂದು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಮಂಗಳೂರಿನ ಸ್ಥಾನೀಯ ಮುಖ್ಯಸ್ಥ ರಘುರಾಮ್.ಜಿ ಅವರು ತಿಳಿಸಿದರು.

ಮಂಗಳೂರು ವಿವಿಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಕಮ್ಯುನಿಕೇಷನ್ ಕ್ಲಬ್ ಉದ್ಘಾಟಿಸಿ ಮಾತನಾಡಿದ ಅವರು, "ಬದಲಾವಣೆಯನ್ನು ನಾವು ಇಂದು ಎಲ್ಲೆಡೆ ಕಾಣುತ್ತೇವೆ.

ಬದಲಾವಣೆ ಜಗದ ನಿಯಮ. ಜ್ಞಾನವಿಲ್ಲದೆ ನೀವು ನಿಮ್ಮ ನಿರ್ದಿಷ್ಟ ಗುರಿ ತಲುಪಲು ಅಸಾಧ್ಯ. ಹಾಗಾಗಿ ಜ್ಞಾನ ಬಹುಮುಖ್ಯವಾದ ಅಂಶವಾಗಿದೆ. ಪತ್ರಕರ್ತನಿಗೆ ಬರವಣಿಗೆಯ ನೋವು ಎಂಬುದು ಹೃದಯದಿಂದ ಹಾಗೂ ಕೈಯಿಂದ ಬರಬೇಕು. ಆಗ ಮಾತ್ರ ಆತ ಉತ್ತಮ ಬರಹಗಾರ ಪತ್ರಕರ್ತನಾಗಲು ಸಾಧ್ಯ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮ ವಿಭಾಗದ ಅಧ್ಯಕ್ಷರಾದ ಪ್ರೊ. ವಹೀದಾ ಸುಲ್ತಾನ, ಪ್ರಾಧ್ಯಾಪಕರಾದ ಡಾ.ಜಿ.ಪಿ ಶಿವರಾಂ ಹಾಗೂ ಕಮ್ಯುನಿಕೇಷನ್ ಕ್ಲಬ್‌ನ ಉಪಾಧ್ಯಕ್ಷ ಮಹಂತೇಶ್ ಹಿರೇಮಠ್ ಉಪಸ್ಥಿತರಿದ್ದರು.

# ರೈತರ ಜ್ಞಾನದ ಮುಂದೆ ವಿಜ್ಞಾನಿ ಸಮಾನರಲ್ಲ

**ಮಂಗಳಗಂಗೋತ್ರಿ:** ರೈತರ ಜ್ಞಾನದ ಮುಂದೆ ಯಾವುದೇ ವಿಜ್ಞಾನಿ ಸಮನಾಗಿಲ್ಲ. ಸುಮಾರು 10ಲಕ್ಷಕ್ಕೂ ಅಧಿಕ ಉತ್ಪನ್ನಗಳನ್ನು ಕಂಡು ಹಿಡಿದವರು ರೈತರು.ಹೀಗಾಗಿ ಅಗ್ರಿಕಲ್ಚರ್ ಇಲ್ಲದೆ ಯಾವುದೇ ಕಲ್ಚರ್ ನಿರ್ಮಾಣವಾಗಲು ಸಾಧ್ಯವಿಲ್ಲ ಎಂದು ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಎಂ.ಮಹಾದೇವಪ್ಪ ಹೇಳಿದರು.

**ಶಿಕ್ಷಕರ ದಿನಾಚರಣೆ ಮತ್ತು ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ**

ಮಂಗಳೂರು ವಿಶ್ವ ವಿದ್ಯಾನಿಲಯದ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಶಿಕ್ಷಕರ ದಿನಾಚರಣೆ ಮತ್ತು ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ವಿಶೇಷ ಉಪನ್ಯಾಸ ನೀಡಿದರು.

ಅಧ್ಯಕ್ಷತೆ ವಹಿಸಿದ ಮಂಗಳೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ಕೆ.ಭೈರಪ್ಪ ಮಾತನಾಡಿ, ಶಿಕ್ಷಕರು ದೇಶವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರು ತರಗತಿಯ ಕೊಠಡಿಯಲ್ಲಿ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವುದರ ಜೊತೆಗೆ ಸದೃಡ ಹಾಗೂ ಬಲಿಷ್ಠ ಭಾರತ



ಮಂಗಳೂರು ವಿವಿಯಲ್ಲಿ ಶಿಕ್ಷಕರ ದಿನಾಚರಣೆ ಮತ್ತು ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎಂ.ಮಹಾದೇವಪ್ಪ ಉದ್ಘಾಟಿಸುತ್ತಿರುವುದು.

ನಿರ್ಮಾಣದಲ್ಲಿ ಮಹತ್ತರ ಪಾತ್ರ ವಹಿಸುತ್ತಾರೆ ಎಂದು ನುಡಿದರು.

**ಸನ್ಮಾನ:** ಬೆಂಗಳೂರು ಇಂಡಿಯನ್ ಕೌನ್ಸಿಲ್ ಆಫ್ ಆಗ್ರಿಕಲ್ಚರಲ್ ರಿಸರ್ಚ್‌ನ ರಾಷ್ಟ್ರೀಯ ಪ್ರಾಧ್ಯಾಪಕ, ಬೆಂಗಳೂರು ಕೃಷಿ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಪಿ.ಜಿ.ಚೆಂಗಪ್ಪ ಹಾಗೂ ಬೆಂಗಳೂರು ವಿವಿಯ ವಿಶ್ರಾಂತ ಕುಲಪತಿ ಪ್ರೊ.ಎನ್.ಆರ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು, ಹಂಪಿ ಮತ್ತು ಕರ್ನಾಟಕ ಮುಕ್ತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಬಿ.ಎ.ವಿವೇಕ ರೈ ಅವರ ಅನುಪಸ್ಥಿತಿಯಲ್ಲಿ ಅವರ ಸನ್ಮಾನ ಪತ್ರ ವಾಚಿಸಲಾಯಿತು.

**ಉತ್ತಮ ಶಿಕ್ಷಕ ಪ್ರಶಸ್ತಿ:**

ಶಿಕ್ಷಕರ ದಿನಾಚರಣೆ ಅಂಗವಾಗಿ ಪ್ರತಿ ವರ್ಷ ಮಂಗಳೂರು ವಿವಿಯ ಕೊಡಮಾಡುವ ಉತ್ತಮ ಶಿಕ್ಷಕ ಪ್ರಶಸ್ತಿಗಳನ್ನು ಈ ಬಾರಿ ಸಾಗರ ಭೂ ವಿಜ್ಞಾನ ವಿಭಾಗದ ಡಾ.ಬಿ.ಆರ್. ಮಂಜುನಾಥ್, ಅರ್ಥಶಾಸ್ತ್ರ ವಿಭಾಗದ ಅಧ್ಯಕ್ಷ ಡಾ. ವಿಶ್ವನಾಥ್ ಹಾಗೂ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ಕೆ. ಕಿಶೋರ್ ಕುಮಾರ್ ಅವರಿಗೆ ನೀಡಿ ಗೌರವಿಸಲಾಯಿತು.

ಪರೀಕ್ಷಾಂಗ ಕುಲಸಚಿವ ಡಾ.ಎ.ಎಂ. ಖಾನ್,ಹಣಕಾಸು ಅಧಿಕಾರಿ ಪ್ರೊ. ಶ್ರೀಪತಿ ಕಲ್ಲೂರಾಯ ಉಪಸ್ಥಿತರಿದ್ದರು.

## ಸಂಪಾದಕೀಯ

### "ಎಚ್ಚರಿಕೆಯ ನಡೆ ಅಗತ್ಯ"

ಪ್ರಜಾಸತ್ತಾತ್ಮಕ ರಾಷ್ಟ್ರವಾಗಿರುವ ಭಾರತ, ಜಾತ್ಯಾತೀತ ತತ್ವದ ತವರೂರಾಗಿದೆ. 1976ರಲ್ಲಿ ಸಂವಿಧಾನದ 42 ನೇ ತಿದ್ದುಪಡಿ ತಂದು ಸಂವಿಧಾನದ ಪ್ರಸ್ತಾವನೆಯಲ್ಲಿ ಒಂದು ಹೊಸ ಶಬ್ಧವನ್ನು ಸೇರಿಸಲಾಯಿತು.ಅದುವೇ ಜಾತ್ಯಾತೀತತೆ. ಭಾರತದ ಜಾತ್ಯಾತೀತತೆಯ ಅರ್ಥ ರಾಜ್ಯದ ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುವ ಅರ್ಥ. ಇದರ ನಡುವೆ ಇದೀಗ ದೇಶಾದ್ಯಂತ ಏಕರೂಪ ನಾಗರೀಕ ಸಂಹಿತೆ ಜಾರಿಗೊಳಿಸುವಂತೆ ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆಯನ್ನು ನಡೆಸಲು ಸುಪ್ರೀಂಕೋರ್ಟ್ 2015ರ ಡಿಸೆಂಬರ್ 7 ರಂದು ನಿರಾಕರಿಸಿತ್ತು. ಇದು ಸಂಸತ್ತಿಗೆ ಬಿಟ್ಟ ವಿಚಾರವಾಗಿದ್ದು, ಸುಪ್ರೀಂಕೋರ್ಟ್ ವ್ಯಾಪ್ತಿಗೆ ಬರುವುದಿಲ್ಲ. ಹೀಗಾಗಿ ಏಕರೂಪ ನಾಗರೀಕ ಸಂಹಿತೆ ಕುರಿತಂತೆ ಕೇಂದ್ರ ಸರಕಾರಕ್ಕೆ ಯಾವುದೇ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ ಸ್ಪಷ್ಟಣೆ ನೀಡಿತ್ತು. ಇದೀಗ ಕೇಂದ್ರ ಸರಕಾರದ ವ್ಯಾಪ್ತಿಯ ಅಡಿಯಲ್ಲಿರುವ ಕಾನೂನು ಆಯೋಗವು ಏಕರೂಪ ನಾಗರೀಕ ಸಂಹಿತೆಯ ಜಾರಿಗೊಳಿಸುವ ಸಲುವಾಗಿ ಜನಾಭಿಪ್ರಾಯ ಸಂಗ್ರಹಕ್ಕೆ ಮುಂದಾಗಿದೆ.ಈ ನಡುವೆ, ದೇಶಾದ್ಯಂತ ಚರ್ಚೆಗಳು ಕಾವೇರುತ್ತಿವೆ.ರಾಷ್ಟ್ರೀಯತೆ ಸಿದ್ಧಾಂತವಿರುವ ರಾಜಕೀಯ ಪಕ್ಷಗಳು ನಾಗರೀಕ ಸಂಹಿತೆಯನ್ನು ಜಾರಿಗೊಳ್ಳಬೇಕೆಂಬ ಉತ್ಸಾಹದಲ್ಲಿದ್ದರೆ, ಅನೇಕ ಪ್ರಾದೇಶಿಕ ಪಕ್ಷಗಳೊಂದಿಗೆ ಜಾತ್ಯತೀತ ಪಕ್ಷಗಳೆಂದು ಕರೆಯುತ್ತಿರುವ ಕೆಲ ಪಕ್ಷಗಳು ಈ ಸಂಹಿತೆಯನ್ನು ಜಾರಿಗೊಳಿಸಲು ವಿರೋಧವನ್ನು ವ್ಯಕ್ತಪಡಿಸುತ್ತಲೇ ಇವೆ. ಸಂವಿಧಾನದ 44 ನೇ ವಿಧಿಯ ಪ್ರಕಾರ ಎಲ್ಲಾ ರಾಜ್ಯಗಳಲ್ಲೂ ಸಮಾನ ನಾಗರೀಕ ಸಂಹಿತೆಯ ಮೂಲಕ ಪ್ರಜೆಗಳ ರಕ್ಷಣೆ ಮಾಡುವುದು ಆಯಾ ಸರ್ಕಾರಗಳ ಹೊಣೆಯಾಗಿದೆ.

ಸಮಾನ ನಾಗರೀಕ ಸಂಹಿತೆಯ ಪ್ರಕಾರ ಪ್ರತಿಯೊಬ್ಬ ಪ್ರಜೆಯ ಹಕ್ಕುಗಳು, ವಿವಾಹ ವಿಚ್ಛೇದನೆ, ದತ್ತು ಮತ್ತು ಕುಟುಂಬ ನಿರ್ವಹಣೆ ಮತ್ತಿತರ ಅಂಶಗಳಿಗೆ ಸಮಾನ ಮಾನದಂಡ ಅನುಸರಿಸಬೇಕು. ಸಂವಿಧಾನದ 32ರ ವಿಧಿಯ ಪ್ರಕಾರ, ಈ ವಿಚಾರಗಳನ್ನು ಯಾವುದೇ ನ್ಯಾಯಾಲಯವು ಅನುಷ್ಠಾನಕ್ಕೆ ತರಲಾರದು. ವಿಶೇಷವೆಂದರೆ, ಭಾರತದಲ್ಲಿ ವಿವಿಧ ಧರ್ಮಗಳಿಗೆ ಅನುಸಾರವಾಗಿ ವೈಯಕ್ತಿಕ ಕಾನೂನುಗಳು ಜಾರಿಯಲ್ಲಿದ್ದು, ಅವುಗಳ ಪ್ರಕಾರವೇ ವಿವಾಹ ,ವಿಚ್ಛೇದನೆ, ಆಸ್ತಿಹಂಚಿಕೆ, ದತ್ತು ಸ್ವೀಕಾರ, ನಿರ್ವಹಣೆ ಮತ್ತಿತರ ಕಾರ್ಯಗಳು ನಡೆಯುತ್ತಿವೆ. ಇವುಗಳಲ್ಲಿ ಅನುಸರಿಸುತ್ತಿರುವ ಮಾನದಂಡವು ವಿಭಿನ್ನವಾಗಿದ್ದು, ಯಾವ ವಿಷಯದಲ್ಲೂ ಏಕರೂಪತೆ ಇಲ್ಲ.

ಏಕರೂಪದ ನಾಗರೀಕ ಸಂಹಿತೆಯ ವಿಚ್ಛೇದನೆ, ವಿವಾಹ ದತ್ತು, ಮಕ್ಕಳ ಪಾಲನೆ, ಉತ್ತರಾಧಿಕಾರದ ವಿಚಾರಕ್ಕೆ ಮಾತ್ರ ಅನ್ವಯಿಸಬೇಕೆ ಎಂಬುದನ್ನು ಪ್ರಶ್ನಿಸಲಾಗಿದೆ.ಇನ್ನೂ ಏಕರೂಪದ ಸಂಹಿತೆ ವೈಯಕ್ತಿಕ ಹಕ್ಕು, ಧಾರ್ಮಿಕ ಹಕ್ಕಿಗೆ ಧಕ್ಕೆ ತರುತ್ತಾ ಎಂಬುದಕ್ಕೂ ಉತ್ತರವನ್ನು ಆಯೋಗ ಬಯಸಿದೆ.ಏಕರೂಪದ ನಾಗರೀಕ ಸಂಹಿತೆಯ ಬಗ್ಗೆ ಆರೋಗ್ಯಕರ ಚರ್ಚೆಯಾಗಬೇಕು ಮತ್ತು ಅನೇಕ ವೈವಿಧ್ಯತೆಗಳಿದ್ದರೂ ಅದನ್ನು ಅಳವಡಿಸುವ ಬಗ್ಗೆ ಮುಕ್ತ ಚರ್ಚೆಯ ಅಗತ್ಯವಿದೆ. ಇದೊಂದು ಸುಕ್ಷ್ಮಾತಿಸೂಕ್ಷ್ಮ ವಿಷಯವಾಗಿರುವುದರಿಂದ ಧಾರ್ಮಿಕ ಕಾನೂನು ಮತ್ತು ನಂಬಿಕೆಗೆ ಧಕ್ಕೆ ಬಾರದ ರೀತಿಯಲ್ಲಿ ಅದನ್ನು ಜಾರಿಗೊಳಿಸುವ ಕುರಿತು ರಾಷ್ಟ್ರವ್ಯಾಪಿ ಸಂವಾದ ನಡೆಯಬೇಕಿದೆ.ಅದರ ಸಾಧಕ–ಬಾಧಕಗಳ ಕುರಿತು ಚರ್ಚೆ ನಡೆಯಬೇಕಿದೆ. ಬಹುವಿಧದ ಕಾನೂನುಗಳ ಬದಲು ಸಾಮಾಜಿಕ ನ್ಯಾಯ ಅಗತ್ಯವಿರುವಂತೆ ಸಂವಿಧಾನದಲ್ಲಿರುವ ಜಾತ್ಯತೀತತೆಯ ತತ್ವಕ್ಕೆ ಯಾವುದೇ ಧಕ್ಕೆ ಬಾರದಂತೆ ಏಕರೂಪ ನಾಗರೀಕ ಸಂಹಿತೆಯ ಜಾರಿಗೊಳ್ಳುವ ಬಗ್ಗೆ ಕೇಂದ್ರ ಸರ್ಕಾರ ಎಚ್ಚರಿಕೆಯ ನಡೆ ಇಡಬೇಕಾಗಿದೆ.

## ಸಂಪಾದಕರಿಗೆ ಪತ್ರ

### ಕಾಲೇಜು ಬಸ್ಸಿನ ಸೌಕರ್ಯ ಒದಗಿಸಿ

ಭಾರತದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಮಂಗಳೂರು ವಿ.ವಿ.ಯು ಒಂದು ಹಾಗೂ ನ್ಯಾಕ್ ನಿಂದ 'ಎ' ಗ್ರೇಡ್ ಮಾನ್ಯತೆ ಪಡೆದ ಹೆಗ್ಗಳಿಕೆಯು ಕೂಡ ಇದೆ. ಈ ಪ್ರಸಿದ್ಧ ವಿ.ವಿ.ಯ ಕ್ಯಾಂಪಸ್ ನಲ್ಲಿ ಅನೇಕ ಪ್ರತಿಭಾನ್ವಿತ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ ಇದರ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರ, ರಾಜ್ಯ, ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿರುತ್ತಾರೆ. ಇಷ್ಟು ಪ್ರಸಿದ್ಧಿಯನ್ನು ಪಡೆದರು ಮಂಗಳೂರು ವಿ ವಿ ಕ್ಯಾಂಪಸ್‌ನಲ್ಲಿ, ಕಾಲೇಜ್ ಬಸ್ಸುನ ಸೌಕರ್ಯ ಇಲ್ಲದೇ ಇರುವುದು ತೀರಾ ಬೇಸರದ ಸಂಗತಿಯಾಗಿದೆ . ಇತ್ತೀಚಿನ ದಿನಗಳಲ್ಲಿ ಮಂಗಳೂರಿನಲ್ಲಿ ವಾಹನಗಳ ಸಂಖ್ಯೆಯೂ ಹೆಚ್ಚುತ್ತಿದ್ದು ದಿನನಿತ್ಯ ಟ್ರಾಫಿಕ್ ಜಾಮ್ ನಂತಹ ಸಮಸ್ಯೆಗಳನ್ನು ಕಾಣುತ್ತಿದ್ದೇವೆ. ಇದರಿಂದ ಸರಿಯಾದ ಸಮಯಕ್ಕೆ ಎಲ್ಲಾ ವಿದ್ಯಾರ್ಥಿಗಳು ಜೊತೆಯಾಗಿ ಹೋಗಿ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಕುರಿತು ಕ್ರಮ ಕೈಗೊಂಡು ಬಸ್ಸಿನ ವ್ಯವಸ್ಥೆ ಕಲ್ಪಿಸಿಕೊಡಬೇಕಾಗಿದೆ.

■ **ಕೌಶಿಕ್ ಎ.ಎಸ್**

## ದೇಶದ ಅತ್ಯಂತ ಅಸುರಕ್ಷಿತ ನಗರ–ದೆಹಲಿ

ಭಾರತದ ರಾಜಧಾನಿ ಹಾಗೂ ಜನಸಂಖ್ಯೆಯಲ್ಲಿ ಎರಡನೇ ಅತೀ ದೊಡ್ಡ ಮಹಾನಗರವೆಂಬ ಹೆಗ್ಗಳಿಕೆಗೆ ದೆಹಲಿ ಪಾತ್ರವಾಗಿದೆ.ಇಲ್ಲಿ 12.25 ದಶಲಕ್ಷಕ್ಕೂ ಮಿಕ್ಕಿ 15.90 ದಶಲಕ್ಷ ನಗರವಾಸಿಗಳನ್ನು ಹೊಂದಿರುವ ದೆಹಲಿ ಜನಸಂಖ್ಯೆಯಲ್ಲಿ ಜಗತ್ತಿನಲ್ಲೇ ದೊಡ್ಡ ನಗರವಾಗಿದೆ.ಆದರೆ ಬೆಚ್ಚಿ ಬೀಳಿಸುವ ಕರಾಳ ಸತ್ಯವೊಂದು ದೆಹಲಿ ನಗರಕ್ಕೆ ಒದಗಿ ಬಂದಿದೆ.ಅದೇನೆಂದರೆ ರಾಷ್ಟ್ರೀಯ ಅಪರಾಧಗಳ ದಾಖಲೆಗಳ ಸಂಸ್ಥೆ (ಎನ್‌ಸಿಆರ್‌ಸಿ)ಯ ಪ್ರಕಾರ ಭಾರತದಲ್ಲಿ ನಡೆಯುವ ನಾಲ್ಕು ಅಪರಾಧಗಳ ಪೈಕಿ ಒಂದು ದೆಹಲಿಯಲ್ಲಿ ನಡೆಯುತ್ತಿದೆ ಎಂಬ ಕಳವಳಕಾರಿ ಅಂಶ ಬೆಳಕಿಗೆ ಬಂದಿದೆ. ಎನ್‌ಸಿಆರ್‌ಸಿ ಬಿಡುಗಡೆಗೊಳಿಸಿರುವ ಮಾಹಿತಿಯ ಪ್ರಕಾರ,ಭಾರತದಲ್ಲಿರುವ 53 ಮಹಾನಗರಗಳ ಪೈಕಿ ಶೇ.25ಕ್ಕಿಂತಲೂ ಒಟ್ಟು ಜನಸಂಖ್ಯೆಯಲ್ಲಿ ಗರಿಷ್ಠ ಮಿತಿಯಲ್ಲಿ ಅಪರಾಧ ಪ್ರಕರಣ ಚಟುವಟಿಕೆಯೂ 2015ರಲ್ಲಿ ದೆಹಲಿಯಲ್ಲಿ ದಾಖಲಾಗಿದೆ. ಆಗ 53 ಮಹಾನಗರಗಳ ಪೈಕಿ ಸುಮಾರು 6,76,086 ಅಪರಾಧ ಪ್ರಕರಣಗಳು ವರದಿಯಾಗಿವೆ.ಅದರಲ್ಲಿ 1,73,947 ಪ್ರಕರಣಗಳಿದ್ದು ಅದರಲ್ಲಿ ಶೇ.25.7ರಷ್ಟು ಪ್ರಮಾಣ ದೆಹಲಿಯಲ್ಲಿಯೇ ನಡೆದಿದೆ. ಸರಾಸರಿ 163 ಲಕ್ಷ ಜನಸಂಖ್ಯೆಯುಳ್ಳ ದೆಹಲಿಯಂತಹ ಮಹಾನಗರದಲ್ಲಿ ಅಪರಾಧ ಚಟುವಟಿಕೆಗಳ ಪ್ರಮಾಣ ಕೇರಳದ ಕೊಲ್ಲಂ ಜಿಲ್ಲೆಯಲ್ಲಿ ನಡೆಯುತ್ತಿರುವ ಅಪರಾಧ ಚಟುವಟಿಕೆಗಳ ಪ್ರಮಾಣಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿದೆ.ಭಾರತದ ವಾಣಿಜ್ಯ ರಾಜಧಾನಿಯಾಗಿರುವ ಮುಂಬೈಯಲ್ಲಿ 2015ರಲ್ಲಿ 42,940ರಷ್ಟು ಅಪರಾಧ ಪ್ರಕರಣಗಳು ಸಾಕ್ಷಿಯಾಗಿದೆ. 22 ದಶಲಕ್ಷದಷ್ಟು ಇರುವ ಜನಸಂಖ್ಯೆಯಲ್ಲಿ ಅಪರಾಧ ಪ್ರಕರಣ ಪ್ರಮಾಣ 23.32ರಷ್ಟು ಕಂಡಿದೆ.ಇದು ಮಹಾನಗರಗಳ ಅಪರಾಧ ದಾಖಲಾಗಿರುವ ಪೈಕಿ ಶೇ.6.40ರಷ್ಟು ಮುಂಬೈ ನಗರ ಒಳಗೊಂಡಿದೆ.ಬಹುತೇಕ ಎಲ್ಲ ರೀತಿಯ ಅಪರಾಧ ಚಟುವಟಿಕೆಗಳ ಪೈಕಿ ಮುಂಬೈ ನಗರಗಿಂತಲೂ ದೆಹಲಿ ಮೇಲುಗೈ ಪಡೆದಿದೆ.ದೆಹಲಿಯಲ್ಲಿ 464 ಹತ್ಯೆಗಳು ನಡೆದರೆ ಮುಂಬೈಯಲ್ಲಿ ಕೇವಲ 169 ಪ್ರಕರಣಗಳು ದಾಖಲಾಗಿದೆ. ಕಳವು ಪ್ರಕರಣದಲ್ಲಿ 10,422ರಷ್ಟು ಪ್ರಕರಣ ಮುಂಬೈಯಲ್ಲಿ ನಡೆದರೆ,



ದೆಹಲಿಯಲ್ಲಿ 96,924ರಷ್ಟು ಕಳವು ಪ್ರಕರಣ ದಾಖಲಾಗಿದೆ. ಅದೇ ರೀತಿ 2015ರಲ್ಲಿ ಮುಂಬೈಯಲ್ಲಿ 1,708ರಷ್ಟು ದರೋಡೆ ಪ್ರಕರಣಗಳು ದಾಖಲಾದರೆ ಅದಕ್ಕಿಂತಲೂ ಜಾಸ್ತಿ ಅಂದರೆ 6,766ರಷ್ಟು ದರೋಡೆ ಪ್ರಕರಣಗಳು ದೆಹಲಿಯಲ್ಲಿ ನಡೆದಿವೆ ಎಂಬ ವಿಸ್ಮಯಕಾರಿ ಸಂಗತಿಯಾಗಿದೆ. ಇನ್ನು, ಅಪಹರಣ ಪ್ರಕರಣಗಳಲ್ಲಿ ದೆಹಲಿ ಅಗ್ರ ಸ್ಥಾನದಲ್ಲಿದೆ. ಅದರಲ್ಲಿ 1,583ರಷ್ಟು ಪ್ರಕರಣಗಳು ದಾಖಲಾಗಿವೆ.ಮುಂಬೈಯಲ್ಲಿ ನಡೆದ ಅತ್ಯಾಚಾರ ಪ್ರಕರಣಗಳು 712ರಷ್ಟಿದ್ದು ಇದರ ಎರಡು ಪಟ್ಟು ಅಧಿಕ ಅಂದರೆ 1,833ರಷ್ಟು ಅತ್ಯಾಚಾರ ಪ್ರಕರಣಗಳು ದೆಹಲಿಯಲ್ಲಿ ನಡೆದಿವೆ. 2015 ರಲ್ಲಿ ಕೋಮು ಹಿಂಸಾಚಾರ ಪ್ರಕರಣದಲ್ಲಿ 396 ರಷ್ಟು ಮುಂಬಯಿಯಲ್ಲಿ ನಡೆದಿದ್ದರೆ, ದೆಹಲಿಯಲ್ಲಿ 108 ರಷ್ಟು ಕೋಮು ಹಿಂಸಾಚಾರ ಪ್ರಕರಣ ಕಡಿಮೆ ಪ್ರಮಾಣದಲ್ಲಿದೆ. ಇನ್ನು ಹಿರಿಯ ನಾಗರಿಕರ ಸುರಕ್ಷತೆ ಬಗ್ಗೆ ಹೇಳುವುದಾದರೆ ಎನ್‌ಸಿಆರ್‌ಬಿ ಬಿಡುಗಡೆಗೊಳಿಸಿರುವ ಮಾಹಿತಿಯಲ್ಲಿ ಎರಡನೇ ಬಾರಿ ಕೂಡ ಹಿರಿಯ ನಾಗರಿಕರಿಗೆ ದೆಹಲಿ ಅಸುರಕ್ಷಿತ ತಾಣವಾಗಿದೆ. ಹಿರಿಯ ನಾಗರಿಕರ ಸುರಕ್ಷತೆಗೆ ಸಂಬಂಧಪಟ್ಟಂತೆ ದೆಹಲಿ ಪೊಲೀಸರು ತುಂಬಾ ಜಾಗರೂಕರಾಗಿದ್ದು 2004ರ ಜೂನ್ 4 ರಂದು ಹಿರಿಯ ನಾಗರಿಕರಿಗೆ ಸುರಕ್ಷತಾ ಸೆಲ್ ಅನ್ನು ಪೊಲೀಸ್ ಪ್ರಧಾನ ಕಚೇರಿಯಲ್ಲಿ ಸ್ಥಾಪಿಸಲಾಗಿದೆ. ಇದೀಗ ಅದು ದೆಹಲಿಯ 11 ಜಿಲ್ಲೆಗಳಲ್ಲೂ ಕೂಡ ಕಾರ್ಯನಿರ್ವಹಿಸುತ್ತಿದೆ.

ಹಿರಿಯ ನಾಗರಿಕರು ಸಂಕಷ್ಟಕ್ಕೀಡಾದ ಸಮಯದಲ್ಲಿ ಅವರಿಗೆ ಸಹಾಯ ಮತ್ತು ಸುರಕ್ಷತೆಯ ನೆರವಿಗೆ 1291 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು. ಈ ರೀತಿಯಲ್ಲಿ ದೆಹಲಿ ಪೊಲೀಸ್ ಇಲಾಖೆಯು ಹಿರಿಯ ನಾಗರಿಕರ ಸುರಕ್ಷತೆಯ ಬಗ್ಗೆ ನಿಗಾ ವಹಿಸಿದೆ.

ಹಿರಿಯ ನಾಗರಿಕರು ಮತ್ತು ಪೋಷಕರ ಕಲ್ಯಾಣ ಮತ್ತು ನಿರ್ವಹಣೆ ಕಾಯ್ದೆ 2007 ರ ಪ್ರಕಾರ 60 ವರ್ಷ ತುಂಬಿದವರು ಮತ್ತು ಅದಕ್ಕಿಂತ ಮೇಲ್ಪಟ್ಟ ನಾಗರಿಕರನ್ನು ಹಿರಿಯ ನಾಗರಿಕರು ಎಂದು ವ್ಯಾಖ್ಯಾನಿಸಲಾಗಿದೆ. ಹಿರಿಯ ನಾಗರಿಕರ ವಿರುದ್ಧ 2014 ರಲ್ಲಿ 18,714 ರಷ್ಟು ಪ್ರಕರಣಗಳಿಗೆ ಹೋಲಿಸುವುದಾದರೆ 2015 ರಲ್ಲಿ 20,532 ರಷ್ಟು ಅಪರಾಧ ಪ್ರಕರಣಗಳು ನಡೆದಿವೆ ಎಂಬ ಕಳವಳಕಾರಿ ಸತ್ಯವನ್ನು ಎನ್‌ಸಿಆರ್‌ಬಿ ಮಾಹಿತಿಯಲ್ಲಿ ಬೆಳಕಿಗೆ ಬಂದಿದೆ.ನವಜಾತ ಶಿಶುಗಳಿಂದ ಹಿಡಿದು ಹಿರಿಯ ವಯಸ್ಸಿನವರೆಗೂ ರಾಷ್ಟ್ರ ರಾಜಧಾನಿ ದೆಹಲಿಯೂ ಅಸುರಕ್ಷಿತ ತಾಣ ಎಂಬುವುದರಲ್ಲಿ ನಿಸ್ಸಂದೇಹ.ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ರಾಷ್ಟ್ರ ರಾಜಧಾನಿಗೆ ದೊಡ್ಡ ಹಿನ್ನಡೆ ಆಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಈ ನಿಟ್ಟಿನಲ್ಲಿ ಸರಕಾರ ಗಂಭೀರ ಪ್ರಯತ್ನ ಮಾಡಿದರೆ ಪ್ರತಿ ನಾಗರಿಕರಿಗೂ ಸುರಕ್ಷತೆಯ ಜಾಗೃತಿ ಅಭಿಯಾನ, ಅಪರಾಧ ಪ್ರಕರಣಗಳ ಶೀಘ್ರ ವಿಲೇವಾರಿ ಮಾಡುವುದರ ಮೂಲಕ ಅಪರಾಧ ಚಟುವಟಿಕೆಗಳ ಕಡಿವಾಣ ಹಾಕುವ ಪ್ರಯತ್ನ ಕೇಂದ್ರ ಮತ್ತು ರಾಜ್ಯ ಸರಕಾರ ಮಾಡಬೇಕಾಗಿದೆ.ದೆಹಲಿ ಕುರಿತು ಇರುವ ಕಪ್ಪು ಕಳಂಕವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ತೊಡೆದು ಹಾಕುವಲ್ಲಿ ಸರಕಾರ ಮತ್ತು ನಾಗರೀಕರು ಸಕ್ರಿಯ ಸಹಭಾಗಿತ್ವದಲ್ಲಿ ಶಕ್ತಿಮೀರಿ ಪ್ರಯತ್ನಿಸಬೇಕಾಗಿದೆ.ಈ ಮೂಲಕ ದೆಹಲಿ ಸುರಕ್ಷಿತ ತಾಣವೆಂಬ ಭಾವನೆ ಪ್ರತಿಯೊಬ್ಬ ಭಾರತೀಯನಲ್ಲಿ ಮೂಡಿಬರುವಂತಹ ವಾತಾವರಣ ಸರಕಾರ ಮತ್ತು ಸಾಮಾಜಿಕ ವ್ಯವಸ್ಥೆಯ ಮೂಲಕ ನಡೆಯಬೇಕಾಗಿದೆ.

■ **ಮುಹಮ್ಮದ್ ನವಾಫ್ ಅಮ್ಮುಂಜೆ**

## ವೃತ್ತಿ ಶಿಕ್ಷಣ ಮತ್ತು ಉತ್ತಮ ಶಿಕ್ಷಣದ ಅವಕಾಶಗಳು

ವಿದ್ಯಾರ್ಥಿ ಬದುಕೆಂದರೆ ಅದು ಬಂಗಾರದಂತಹ ಬದುಕು. ಅದು ಚಿನ್ನದಂತೆ ಅಗ್ನಿಯಲ್ಲಿ ಪುಟವಿಟ್ಟು ಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳು ಕಠಿಣವಾದ ನಿರ್ಧಾರಗಳನ್ನು ಸೂಕ್ತ ಕಾಲದಲ್ಲಿ ಕೈಗೊಳ್ಳಬೇಕಾಗುತ್ತದೆ. ಕಲಿತು ಹೊರಬರುವ ವಿದ್ಯಾರ್ಥಿಗಳು ಮುಂದೇನು ಮಾಡಬೇಕು ಎಂಬ ಬಗ್ಗೆ ಮುಗ್ಧರಾಗಿರುತ್ತಾರೆ ಮತ್ತು ಗೊಂದಲದಲ್ಲಿರುತ್ತಾರೆ. ಕೆಲವರಿಗೆ ಸರಿಯಾದ ವೃತ್ತಿಜೀವನದ ಮಾರ್ಗದರ್ಶನವಿರುವುದಿಲ್ಲ. ಆದ್ದರಿಂದ ಅವರು ಪರಿಪೂರ್ಣವಾದ ಮಾರ್ಗದರ್ಶನವನ್ನು ಈ ಹಂತದಲ್ಲಿ ಪಡೆಯುವುದು ಅತ್ಯಂತ ಮುಖ್ಯವಾಗಿರುತ್ತದೆ.

ವ್ಯಕ್ತಿ ತನ್ನ ಬದುಕಿನಲ್ಲಿ ಮೂರು ಆಯ್ಕೆಗಳಲ್ಲಿ ಸೋಲಬಾರದು

ಶಿಕ್ಷಣದ ಆಯ್ಕೆ, ಉದ್ಯೋಗದ ಆಯ್ಕೆ ಮತ್ತು ಬಾಳಸಂಗಾತಿಯ ಆಯ್ಕೆ. ಈ ಮೂರು ಆಯ್ಕೆಗಳಲ್ಲಿ ಯಶಸ್ಸುಗಳಿಸಿದರೆ ಜೀವನ ಉಜ್ವಲವಾಗುತ್ತದೆ. ಯಾವುದೇ ಶಿಕ್ಷಣ ವ್ಯವಸ್ಥೆಯಲ್ಲಿ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಹಿಗ್ಗಿಸಿ ಕೊಳ್ಳುವುದರೊಂದಿಗೆ ಈ ಸಮಾಜದ ರಾಷ್ಟ್ರದ ಹಿತವನ್ನು ಗಮನದಲ್ಲಿಟ್ಟುಕೊಂಡು ವೃತ್ತಿಯನ್ನು ಸೇವಾ ಭಾವನೆಯಿಂದ ಮಾಡಿದಾಗ ಮಾತ್ರ ವೃತ್ತಿಗೂ ಗೌರವ, ವ್ಯಕ್ತಿಗೂ ಗೌರವ. ವೃತ್ತಿ ಶಿಕ್ಷಣದ ಆಯ್ಕೆ ಹಿಂದಿನ ಕಾಲಘಟ್ಟದಲ್ಲಿ ಅತ್ಯಂತ ಸಮರ್ಪಕವಾದ ಒಂದು ಚಿಂತನೆ ಪ್ರತಿಭಾವಂತರು ಉನ್ನತ ಶಿಕ್ಷಣವನ್ನು ಆಯ್ದುಕೊಂಡು ಯಶಸ್ಸಿನ ಹಾದಿಯಲ್ಲಿ ಮುನ್ನಡೆಯುವುದು ಹೆಚ್ಚು ಸೂಕ್ತ. ಪ್ರೌಢಶಿಕ್ಷಣ ಕೊನೆಗೊಂಡೊಡನೆ ಅಂತಹ ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣಕ್ಕಾಗಿ ವಿವಿಧ ಕಾಲೇಜುಗಳಲ್ಲಿ ಪ್ರವೇಶ ಗಿಟ್ಟಿಸಲು ತೀವ್ರ ರೀತಿಯಲ್ಲಿ ಪೈಪೋಟಿ ನಡೆಸುತ್ತಿರುತ್ತಾರೆ. ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣವು ಹೆಚ್ಚಿನ ವಿದ್ಯಾರ್ಥಿಗಳ ಮೊದಲ ಆದ್ಯತೆಯಾಗಿರುತ್ತದೆ. ಇತರ ವೈವಿಧ್ಯಮಯ ಶಿಕ್ಷಣವನ್ನು ಪಡೆದ ಲಕ್ಷಾಂತರ ವಿದ್ಯಾರ್ಥಿಗಳು ದೇಶ, ವಿದೇಶಗಳಲ್ಲಿ ದುಡಿಯುತ್ತಿದ್ದು, ಅವರೆಲ್ಲಾ ಸಂತೃಪ್ತ ಜೀವನ ನಡೆಸುತ್ತಿದ್ದಾರೆ.

ಈಗ ಎಲ್ಲಾ ರೀತಿಯ ವೃತ್ತಿಪರ ಶಿಕ್ಷಣ ಕ್ಷೇತ್ರಗಳು ಬದಲಾವಣೆಯ ಹಾದಿಯಲ್ಲಿದೆ. ವೈಜ್ಞಾನಿಕ ಹಾಗೂ ಆರ್ಥಿಕ ಕ್ಷೇತ್ರಗಳ ಮಹತ್ತರ ಬದಲಾವಣೆಗಳು ಕಾನೂನು ವಿದ್ಯಾಭ್ಯಾಸದ ವ್ಯಾಪ್ತಿ,ವಿಷಯ ಮತ್ತು ಅವಕಾಶಗಳಲ್ಲಿ ಅಮೂಲಾಗ್ರ ಪರಿವರ್ತನೆ ಉಂಟು ಮಾಡಿದೆ. ಇಂದಿನ ಉದ್ಯೋಗ ಜಗತ್ತು ಹೆಚ್ಚೆಚ್ಚು ಸ್ಪರ್ಧಾತ್ಮಕವಾಗುತ್ತಾ ಹೊರಟಿದೆ. ಇದಕ್ಕಾಗಿ ನಮ್ಮನ್ನು ನಾವು ಒಗ್ಗಿಸಿಕೊಂಡಾಗಲೇ ಯಶಸ್ಸಿನ ಹತ್ತಿರ ಸುಳಿಯಲು ಸಾಧ್ಯವಾಗುತ್ತದೆ. ಸರಕಾರಿ ಕೆಲಸವನ್ನು ಬದಿಗಿಟ್ಟು ನೋಡುವುದಾದರೆ ಇಂದಿನ ಕಾರ್ಪೋರೇಟ್ ಪ್ರಪಂಚದಲ್ಲಿ ಕಡಿಮೆ ಸಮಯದಲ್ಲಿ ಹೆಚ್ಚಿನ ಕೆಲಸ ಮಾಡುವ ಅರ್ಹತೆಯನ್ನು ರೂಢಿಸಿಕೊಂಡವರಿಗೆ ಇಲ್ಲಿ ಬೆಳೆಯಲು ಅವಕಾಶ ಅಪಾರ.

ಉನ್ನತ ಶಿಕ್ಷಣವೆನ್ನುವುದು ಒಂದು ರೀತಿಯಲ್ಲಿ ಜೀವನಕ್ಕೆ ಗಟ್ಟಿ ನೆಲಗಟ್ಟನ್ನು ಒದಗಿಸಬಲ್ಲ ಮತ್ತು ವ್ಯಕ್ತಿಗೆ ಮೌಲ್ಯವನ್ನು ಬದುಕಿಗೆ ಬೆಲೆಯನ್ನು ಕೊಡಬಲ್ಲ ಕ್ಷೇತ್ರ ವಿಷಯ ಸಂಪನ್ನತೆಯ ಜೊತೆಗೆ ಪೂರ್ಣತೆಯ ಪ್ರಾಪ್ತಿಯೆಡೆಗೆ ಹೋಗುವ ನಡೆಯೆಂದರೆ ಹೆಚ್ಚು ಸೂಕ್ತವಾದೀತು. ಶಿಕ್ಷಣ ಎನ್ನುವುದು ಆತ್ಮೋನ್ನತಿ ಸಾಧನೆಯ ಒಂದು ವ್ಯವಸ್ಥೆ ಹೊರತು ಹೊಟ್ಟೆ ಹೊರೆಯುವ, ದೇಹ ಬೆಳೆಸುವ ಕಾಯಕವಲ್ಲ. ಸೂಕ್ತ ಕೆಲಸ ಗಿಟ್ಟಿಸಿಕೊಳ್ಳಲು ಬೇಕಾಗಿರುವ ಅರ್ಹತೆ ಮತ್ತು ಸಂಯಮ ಯುವಕ ಯುವತಿಯರಿಗೆ ಅತ್ಯಗತ್ಯ. ಈ ವ್ಯವಸ್ಥೆಯಲ್ಲಿ ಕೆಲಸವಿಲ್ಲ ಎಂದು ಭಾವಿಸಬೇಕಾಗಿಲ್ಲ. ಮನಸ್ಸಿದ್ದರೆ ಮಾರ್ಗವಿದೆ.

ಇಂದು ಶಿಕ್ಷಣ ಕೇಂದ್ರಗಳು ವ್ಯಾಪಾರ ಕೇಂದ್ರಗಳಾಗಿ ಮಾರ್ಪಾಡಾಗುತ್ತಿವೆ ಎಂಬ ಆರೋಪ ಎಲ್ಲೆಡೆ ಕೇಳಿ ಬರುತ್ತಿದೆ. ಆದರೆ ಕೆಲವು ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಮಾರಾಟ ಮಾಡುವ ಕೇಂದ್ರವಾಗಿದೆ. ಮಾನವೀಯ ಕೇಂದ್ರಗಳಾಗಿ ಮೂಡುತ್ತಿರುವುದು ಗಮನಾರ್ಹ.

ಉನ್ನತ ಶಿಕ್ಷಣದ ಪಡೆದ ವಿದ್ಯಾರ್ಥಿಗಳಿರುವ ರಾಷ್ಟ್ರ ನಿಜಕ್ಕೂ ಅಭಿವೃದ್ಧಿ ಶೀಲ ದೇಶವಾಗುತ್ತದೆ. ಮಾನವ ಸಂಪನ್ಮೂಲ ಪರಿಪೂರ್ಣ ಸದ್ಬಳಕೆ ಶಿಕ್ಷಣದ ಸಂಸ್ಥೆಗಳ ಹಾಗೂ ಬೋಧಕರ ಬದ್ಧತೆ ಅವಶ್ಯ .ಉನ್ನತ ಶಿಕ್ಷಣದ ಸುಧಾರಣೆ ಹಾಗೂ ಅಭಿವೃದ್ಧಿಯಲ್ಲಿ ಸಾರ್ವಜನಿಕ,ಖಾಸಗಿ ಸಂಸ್ಥೆಗಳ ಬುದ್ಧಿಜೀವಿಗಳ ಪಾತ್ರ ಹಿರಿದು.

■ **ರಂಜಿನಿ**

# ಅಲೋಶಿಯಸ್ ಚರ್ಚ್‌ನ ರಮಣೀಯ ಚಿತ್ರ ಕಲೆಗಳು



ಮಂಗಳೂರಿನ ಇತಿಹಾಸ ಪ್ರಸಿದ್ಧ ಸ್ಥಳಗಳಲ್ಲಿ ನಗರದ ಹೃದಯ ಭಾಗದಲ್ಲಿರುವ ಸಂತ ಅಲೋಶಿಯಸ್ ಚರ್ಚ್ ಸಹ ಒಂದಾಗಿದೆ. ಇಂದು.ಸುಮಾರು 134 ವರ್ಷಗಳ ಇತಿಹಾಸವಿರುವ ಈ ಇಗರ್ಜಿಯು 1880 ರಲ್ಲಿ ಸ್ಥಾಪನೆಯಾಯಿತು.ಇದು ನಗರದ ಬಾವುಟಗುಡ್ಡದ ಸಂತ ಅಲೋಶಿಯಸ್ ಕಾಲೇಜು ಆವರಣದಲ್ಲಿದೆ. 1889 ಅಂದರೆ ಸುಮಾರು 127 ವರ್ಷ ಹಿಂದೆ ಇಟಲಿಯ ಜೆಸ್ಯಿಟ್ ಮಿಷನ-ರಿಯಾದಆಂಟೋನಿಯೋ ಮೊಸ್ಚೆನಿಯವರು ಇಲ್ಲಿನ ಚರ್ಚಿಗೆ ಅತ್ಯದ್ಭುತ ಕೊಡುಗೆ ನೀಡಿದ್ದಾರೆ.ಇಲ್ಲಿ ಅವರ ಚಿತ್ರಕಲೆಯು ನಿಜಕ್ಕೂ ಮಂತ್ರಮುಗ್ಧಗೊಳಿಸುತ್ತದೆ. ಈ ಚಿತ್ರಗಳಿಂದಾಗಿಯೆ ಈ ಚರ್ಚು ಪ್ರಾಮುಖ್ಯತೆ ಪಡೆದಿದೆ.ಏಕೆಂದರೆಇಡೀ ಪ್ರಪಂಚದಲ್ಲಿಯೇ ಈ ಚರ್ಚ್ ಚಿತ್ರಕಲಾಕೃತಿಗೆ ಎರಡನೇ ಸ್ಥಾನ ಪಡೆದುಕೊಂಡಿದೆ.

ನಾವು ಇಲ್ಲಿ ಎರಡು ರೀತಿಯ ಚಿತ್ರಕಲೆಗಳನ್ನು ಕಾಣಬಹುದು.ಒಂದು ಇಟಾಲಿಯನ್ ಪ್ರೆಸ್ಕೋಸ್ ಅಂದರೆ ಒದ್ದೆಯಾದ ಮಣ್ಣಿನ ಗೋಡೆಯ ಮೇಲೆ ಕೆಲವು ನೈಸರ್ಗಿಕ ಬಣ್ಣದ ಹುಡಿಗಳನ್ನು ಬಳಸಿ ಮಾಡಿರುವಂತದು.ಈ ಚಿತ್ರವನ್ನು ನಾವು ಇಲ್ಲಿನ ಕಂಬ, ಗೋಡೆ ಹಾಗುಡ ಕಮಾನುಗಳಲ್ಲಿ ಕಾಣಬಹುದು.

ಇನ್ನೊಂದು ಕ್ಯಾನ್ವಸ್ ಬಟ್ಟೆಯ ಮೇಲೆ ನೈಸರ್ಗಿಕ ಬಣ್ಣಗಳನ್ನು ಬಳಸಿ ಮಾಡಿದ ಚಿತ್ರಗಳು.ಇಡೀ ಚರ್ಚಿನ ಮೇಲ್ಛಾವಣಿ ಗೋಡೆಯ ಮೇಲೆ ಇಂತಹುದೇ ಬಟ್ಟೆಯನ್ನು ಬಳಸಿ ಮಾಡಿದ ಚಿತ್ರಗಳು ನಿಜಕ್ಕೂ ಬೆರಗುಗೊಳಿಸುತ್ತಿವೆ.

ಇಲ್ಲಿನ ಚಿತ್ರಕಲೆಗಳು ಇಬ್ಬರ ಜೀವನ ಚರಿತ್ರೆಯನ್ನು ಕುರಿತಾಗಿ ಚಿತ್ರಿಸಿದ ಚಿತ್ರಣವಾಗಿದೆ.ಒಂದು ಏಸು ಕ್ರಿಸ್ತರ ಸಂಪೂರ್ಣ ಜೀವಣಚಿತ್ರ. ಇದು ಚರ್ಚಿನ ಗೋಡೆಯ ಮೇಲೆ ಅದ್ಬುತವಾಗಿ ಚಿತ್ರಿಸಲಾಗಿದೆ. ಎರಡನೆಯದು ಸಂತ ಅಲೋಶಿಯಸ್‌ನ ಜೀವನ ಚಿತ್ರಣ. ಇನ್ನೊಂದು ವಿಚಾರವೆಂದರೆ ಇಲ್ಲಿನ ಶಿಕ್ಷಣ ಸಂಸ್ಥೆ ಹಾಗು ಈ ಚರ್ಚ್‌ನ್ನು ಸಂತ ಅಲೋಶಿಯಸ್ ಗಾಗಿ ಸಮರ್ಪಿಸಲಾಗಿದೆ.ಹೀಗಾಗಿ ಇಲ್ಲಿನ ಚರ್ಚ್‌ನಲ್ಲಿ ಅವರದ್ದೇ ಮೂರ್ತಿಯನ್ನು ಸಹ ಪೂಜಿಸಲಾಗುತ್ತದೆ.ಇನ್ನು ಸಂತ ಅಲೋಶಿಯಸ್ ರ ಜೀವನ ಕುರಿತ ಚಿತ್ರಣವನ್ನು ಚರ್ಚಿನ ಮೇಲ್ಛಾವಣಿಯಲ್ಲಿ ನಾವು ಕಾಣಬಹುದು. ಹಾಗೂ ಇಲ್ಲಿನ ವೇದಿಕೆಯಲ್ಲಿ ಚಿತ್ರಿಸಿದ ಮುಖ್ಯ ಚಿತ್ರಗಳು ಅಲೋಶಿಯಸ್ ಅವರು ರೋಮ್ ನಲ್ಲಿ ಕಲಿಯುತ್ತಿದ್ದಾಗ ಪ್ಲೇಗ್ ರೋಗ ಹರಡಿ ಜನರು ಯಾರೂ ನೋಡದೆ ನಿರ್ಗತಿಕರಾದಾಗ ಸಂತ ಅಲೋಶಿಯಸ್ ಅವರು ಸ್ವಯಂಸೇವಕ ಸಂಘಕಟ್ಟಿ ಅವರ ಸೇವೆ ಮಾಡುತ್ತಾರೆ.ಆಗ ಅವ-ರಿಗೂ ಪ್ಲೇಗು ತಗುಲಿ ಮರಣದ ಹಾಸಿಗೆಯಲ್ಲಿದ್ದೂ ಒಂದು ವರ್ಷದೊಳಗೆ ತೀರಿ ಹೋಗುತ್ತಾರೆ. ಇವುಗಳ ಚಿತ್ರವೂ ನಿಜಕ್ಕೂ ಕಣ್ಣಿಗೆ ಕಟ್ಟಿದಂತೆ ಚಿತ್ರಿಸಲಾಗಿದೆ.ಸಂತ ಅಲೋಶಿಯಸ್ ಅವರು ಅತೀ ಕಿರಿಯ ವಯಸ್ಸು ಅಂದರೆ 23ನೇ ವಯಸ್ಸಿಗೆ ತೀ-ರಿಕೊಳ್ಳುತ್ತಾರೆ ಅದಕ್ಕೆ ಕ್ರೈಸ್ತ ಧರ್ಮ ಸಭೆ ಅವರನ್ನು ಯುವಕರ ಪಾಲಕ ಎಂದು ಪೋಷಿಸುತ್ತಾರೆ ಹಾಗೂ ಸಂತ ಅಲೋಶಿಯಸ್ ಕಾಲೇಜಿನ ವಿದ್ಯಾರ್ಥಿಗಳು ಅವರ ಹಾದಿಯನ್ನೇ ಅನುಸರಿಸಲಿ ಎಂಬ ಧ್ಯೇಯೋದ್ದೇಶವನ್ನು ಹೊಂದಿದೆ.

ಇನ್ನು ಇಲ್ಲಿನ ವೇದಿಕೆಯಲ್ಲಿರುವ ಚಿತ್ರಣಗಳನ್ನು ನೋಡಲು ವಿಗ್ರಹಗಳಂತೆ ಭಾಸವಾಗುತ್ತದೆ .ನಿಜಕ್ಕೂ ಅದು ಅದ್ಭುತ ಚಿತ್ರಣ.ಇನ್ನು ಅಲ್ಲಿನ ನೆಲ ನೋಡಲು ಮೆಟ್ಟಿಲುಗಳ ತರಹ ಕಾಣುತ್ತದೆ . ಆದರೆ ಇದು ಬೆಲ್ಜಿಯಂನಿಂದ ತರಲಾದ ವಿಶೇಷ ಇಟ್ಟಿಗೆಗಳು.ಇದರ ವಿಶೇಷವೆಂದರೆ ನಾವು ಯಾವ ಕಡೆಯಿಂದ ನೋಡಿದರೂ ಅದು ಮೆಟ್ಟಿಲುಗಳ ರೀತಿ ಕಾಣುತ್ತದೆ.ಇಲ್ಲಿನ ಚಿತ್ರಗಳ ಅಳತೆಯು ವಿಶಿಷ್ಟವಾಗಿದೆ.ಹಾಗೂ ಆ ಚಿತ್ರಗಳನ್ನು ವೀಕ್ಷಿಸಿದಾಗ ಅದು ಮೂರ್ತಿರೂಪದಂತೆ ಕಾಣುತ್ತದೆ,ನಾವು ಆ ಚಿತ್ರಗಳ ನಡುವೆ ನಿಲ್ಲಬಹುದೇನೋ ಎಂದು ಭಾಸವಾಗುತ್ತದೆ.

ಇಂತಹ ಚರ್ಚ್‌ನ ಈ ರೀತಿಯ ಚಿತ್ರಣಗಳನ್ನು ಇಷ್ಟೂ ವರ್ಷಗಳವರೆಗೆ ಕಾಪಾಡಿಕೊಂಡು ಬಂದುದು ನಿಜಕ್ಕೂ ಆಶ್ಚರ್ಯವೇ ಸರಿ. ಏಕೆಂದರೆ ಮಂಗಳೂರಿನಂತಹ ಕಡಲತಡಿಯ ಊರಿನಲ್ಲಿ ಪರಿಸರದ ಗಾಳಿಯು ಸಮುದ್ರದ ಹವಾದಿಂದ ಉಪ್ಪಿನಿಂದ ಕೂಡಿರುತ್ತದೆ. ಇಂತಹ ಚಿತ್ರಗಳು ಈ ಗಾಳಿಯಿಂದ ಹಾಳಾಗುವ ಸಂಭವ ಹೆಚ್ಚು, ಹೀಗಾಗಿ ಇಲ್ಲಿನ ಬಾಗಿಲು ಹಾಗೂ ಕಿಟಕಿಯ ಗಾಜುಗಳಿಂದ ಸೂರ್ಯರಶ್ಮಿಯು ಒಳಗೆ ಬರದಂತೆ ಗಾಜುಗಳಿಗೆ ಬಣ್ಣ ಹಚ್ಚಲಾಗಿದೆ. ಇದೇ ಅಲ್ಲದೆ ವಿದ್ಯುತ್ ದೀಪಗಳೂ ಸಹಾ ಪ್ರಖರ ಬೆಳಕು ಪರಿಣಾಮ ಬೀರುತ್ತವೆ. ಹಾಗಾಗಿ ಇದರೊಳಗೆ ಮಂದ ಬೆಳಕಿನ ದೀಪಗಳನ್ನು ಅಳವಡಿಸಲಾಗಿದೆ. ಹೀಗೆ ಇದನ್ನು ಬಹಳ ಜಾಗರೂಕತೆಯಿಂದ ಸಂರಕ್ಷಿಸಲಾಗಿದೆ. ಅಲ್ಲದೆ ಇದರ ಸಂರಕ್ಷಣೆಗಾಗಿ ಅಂದರೆ ವಿಶೇಷವಾಗಿ ಇಂತಹ ಚಿತ್ರಗಳನ್ನು ಸಂರಕ್ಷಿಸಲೆಂದೇ ಇರುವ ಸಂಸ್ಥೆ. ಇವರು ಪ್ರತೀ 15 ವರ್ಷಗಳಿಗೊಮ್ಮೆ ಭೇಟಿ ನೀಡಿ ಇಲ್ಲಿನ ಚಿತ್ರಗಳ ಬಗ್ಗೆ ಕಾಳಜಿವಹಿಸಿ, ಅದರ ಸ್ವಚ್ಛತೆಯನ್ನು ಸಹಾ ಮಾಡಿ ಇಂತಹ ಚಿತ್ರಣಗಳನ್ನು ಕಾಪಾಡುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ಅದ್ಭುತವಾದ ಈ ಚರ್ಚ್ ಮಂಗಳೂರಿನ ಹಿರಿಮೆಗೆ ಒಂದು ಗರಿಯಾಗಿದೆ.

■ ಶಿಲ್ಪಾ ಜೆ. ಆಚಾರ್ಯ

## ರಾಷ್ಟ್ರ ಮಟ್ಟದ ಕ್ರೀಡಾಪಟು ಅವಿನ್



ವಿದ್ಯಾರ್ಥಿ ಅವಿನ್

**ಮಂಗಳಗಂಗೋತ್ರಿ:** ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವಿದ್ಯಾರ್ಥಿಯಾಗಿರುವ ರಾಷ್ಟ್ರ ಮಟ್ಟದ ಕ್ರೀಡಾಪಟು ಅವಿನ್ ಕುಮಾರ್. ಕೆ. ಕ್ರೀಡಾ ಜಗತ್ತಿನಲ್ಲಿ ತಮ್ಮ ಛಾಪನ್ನು ಮೂಡಿಸಿದ ನವ ಉತ್ಸಾಹಿ ಪ್ರತಿಭೆ. ಕ್ರೀಡಾ ಜಗತ್ತಿನಲ್ಲಿ ಅವರು ತಮ್ಮದೇ ಆದ ಹಲವಾರು ಸಾಧನೆಗಳನ್ನು ಮಾಡಿದ್ದಾರೆ. ಕ್ರೀಡೆಯೇ ತನ್ನ ಬದುಕು ಎಂಬಂತೆ ಅದರಲ್ಲೇ ಸದಾ ತಲ್ಲೀನರಾಗಿರುವ ಅವರು ಅದಕ್ಕಾಗಿ ತಮ್ಮ ಬದುಕನ್ನು ಮುಡಿಪಾಗಿಸಿದ್ದಾರೆ.

ಇವರ ತಂದೆ ಕೃಷ್ಣಪ್ಪ ಪೂಜಾರಿ, ತಾಯಿ ಸುಮತಿ. ಇವರ ಹುಟ್ಟೂರು ಪುತ್ತೂರು ತಾಲೂಕಿನ ಕೆಯ್ಯಾರು ಗ್ರಾಮದ ಕಣಿಯರೋಡಿ. ಇವರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ತಮ್ಮ ಊರಿನಲ್ಲಿಯೇ ಮುಗಿಸಿ ತಮ್ಮ ಪದವಿ ಹಾಗೂ ಬಿ.ಎಡ್ ಶಿಕ್ಷಣವನ್ನು ಆಳ್ವಾಸ್ ಕಾಲೇಜಿನಲ್ಲಿ ಪಡೆದಿರುತ್ತಾರೆ. ಸದ್ಯ ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಇಪೆಡ್ ಶಿಕ್ಷಣವನ್ನು ಪಡೆಯುತ್ತಿದ್ದಾರೆ.

**ಕ್ರೀಡಾಸಕ್ತಿ**

ತಮ್ಮ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವಾಗಲೇ ಶಾಲೆಯಲ್ಲಿ ನಡೆಸುತ್ತಿರುವ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಈ ಮಧ್ಯೆ ಅವರ ಕ್ರೀಡಾ ಆಸಕ್ತಿಯನ್ನು ಗಮನಿಸಿದ ಜಗನ್ನಾಥ ಶೆಟ್ಟಿ ಎಂಬವರು ಇವರಿಗೆ ಮೊದಲ ಕ್ರೀಡಾ ಗುರುವಾದರು. ಇವರ ಈ ಕ್ರೀಡಾ ಆಸಕ್ತಿಗೆ ನೀರೆರೆದು ಪೋಷಿಸಿದವರು ಆಳ್ವಾಸ್ ಕಾಲೇಜಿನ ವಸಂತ್ ಜೋಗಿ. ಈ ಮೂಲಕ ಉದ್ದ ಜಿಗಿತ ಸಾಧನೆಗೆ ಭದ್ರ ಅಡಿಪಾಯ ಹಾಕಿದರು.

ಇವರು ಉದ್ದ ಜಿಗಿತ ಮಾತ್ರವಲ್ಲವಲ್ಲದೆ, ಕಬ್ಬಡಿ, ಕೋ ಕೋ, ಕ್ರೀಡೆಗಳಲ್ಲಿಯೂ ಸಾಧನೆಯನ್ನು ಮಾಡಿ ರಾಷ್ಟ್ರ ಮತ್ತು ರಾಜ್ಯ ವಿವಿ ಗಳಲ್ಲಿ ಅಮೂಲ್ಯ ಸಾಧನೆ ಮಾಡಿದ್ದಾರೆ.

ಜೊತೆಗೆ ಕ್ರೀಡಾ ಕ್ಷೇತ್ರದ ಬಗ್ಗೆ ತನ್ನ ಜ್ಞಾನಧಾರೆಯನ್ನು ಕ್ರೀಡಾಸಕ್ತಿಯಿರುವ ವಿದ್ಯಾರ್ಥಿಗಳಿಗೆ ನೀಡಿ ಪೋಷಿಸುತ್ತಿದ್ದಾರೆ.

**ಕ್ರೀಡಾ ಸಾಧನೆ**

ಅವಿನ್ ಕುಮಾರ್. ಕೆ ಅವರು 2010-11ನೇ ಅಂತರ ವಿಶ್ವವಿದ್ಯಾನಿಲಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಬೆಳ್ಳಿಯ ಪದಕ ಪಡೆದಿರುತ್ತಾರೆ. ಅಲ್ಲದೇ 2014-15ನೇ ಸಾಲಿನ ಫೆಡರೇಷನ್ ಕಪ್‌ನ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಐದನೇ ಸ್ಥಾನವನ್ನು ಗಳಿಸಿಕೊಂಡಿರುತ್ತಾರೆ.

ಅದೇ ಸಾಲಿನ ಮುಕ್ತ ರಾಷ್ಟ್ರಮಟ್ಟದ ಅಥ್ಲೆಟಿ-ಕ್ ಕ್ರೀಡಾಕೂಟ ದಲ್ಲಿ ಭಾಗವಹಿಸಿರುವುದು ಮಾತ್ರವಲ್ಲದೇ 2014-15ನೇ ಸಾಲಿನ ಕೇರಳದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಏಳನೇ ಸ್ಥಾನವನ್ನು ಪಡೆದ ಕ್ರೀಡಾಪಟುವಾಗಿದ್ದಾರೆ.

2010-11ನೇ ಸಾಲಿನಲ್ಲಿ ಮಂಗಳೂರು ವಿವಿಯಲ್ಲಿ ನಡೆದ ಅಥ್ಲೆಟಿಕ್ ಕೂಟದಲ್ಲಿ ಪ್ರಥಮ ಸ್ಥಾನ ಪಡೆದು ಹೊಸ ದಾಖಲೆ ನಿರ್ಮಿಸುವುದರೊಂದಿಗೆ 2010-11ನೇ ಸಾಲಿನಲ್ಲಿ ಮಂಗಳೂರು ವಿವಿಯಲ್ಲಿ ನಡೆದ ಅಥ್ಲೆಟಿಕ್ ಕೂಟದಲ್ಲಿ ವಿವಿ ಕ್ಯಾಂಪಸ್ ತಂಡವನ್ನು ಪ್ರತಿನಿಧಿಸಿ ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಪಡೆದ ಹೆಗ್ಗಳಿಕೆ ಇವರದು.

ಇವಿಷ್ಟೇ ಮಾತ್ರವಲ್ಲದೇ 2013-14ನೇ ಸಾಲಿನಲ್ಲಿ ರಾಜ್ಯಮಟ್ಟದ ದಸರಾ ಅಥ್ಲೆಟಿಕ್ ಕ್ರೀಡಾ ಕೂಟದಲ್ಲಿ 7.62 ಮೀ. ದೂರ ಜಿಗಿದು ಪ್ರಥಮ ಸ್ಥಾನ ಪಡೆದು ನೂತನ ದಾಖಲೆ ನಿರ್ಮಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಇದು ಈವರೆಗಿನ ಇವರ ಜೀವನದ ಶ್ರೇಷ್ಠ ದಾಖಲೆಯಾಗಿದೆ.

■ ಅಭಿಷೇಕ್ ಹೆಚ್.ಎಸ್

## ಬ್ಯಾರಿ ಭಾಷೆಗೊಂದು ತ್ರಿಭಾಷಾ ನಿಘಂಟು

ಭಾರತೀಯ ಬ್ಯಾರಿ ಭಾಷೆಯಾದ ಬ್ಯಾರಿ ಕರ್ನಾಟಕ (ದ.ಕ ಮತ್ತು ಉಡುಪಿ ಜಿಲ್ಲೆಗಳು) ಮತ್ತು ಕೇರಳದ ಕೆಲವು ಭಾಗಗಳಲ್ಲಿ ಬ್ಯಾರಿ ಅಥವಾ ನಕ್ಕ್ ನಿಕ್ಕ್ ಎಂದು ಹೆಸರಾದ ಈ ಭಾಷೆ ತುಳು ಧ್ವನಿವಿಜ್ಞಾನ ಮತ್ತು ವ್ಯಾಕರಣ ಸ್ವರೂಪದಲ್ಲಿ ಇದೆ. ಆದರೆ ಇದೀಗ ಬ್ಯಾರಿ ಸಾಹಿತ್ಯ ಅಕಾಡಮಿ ವತಿಯಿಂದ ಬ್ಯಾರಿ-ಕನ್ನಡ-ಇಂಗ್ಲಿಷ್ ತ್ರಿಭಾಷಾ ಶಬ್ದಕೋಶಕ್ಕೆ ಚಾಲನೆ ನೀಡಲಾಗಿದೆ. ಅಲ್ಲದೇ ಇದೀಗ ಅಂತಿಮ ಹಂತದಲ್ಲಿದ್ದು, ಕರಾವಳಿಯ ಬ್ಯಾರಿ ಭಾಷೆಯು ಶ್ರೀಮಂತ ಸಾಹಿತ್ಯದ ಪರಿಣಾಮ ಬೀರುತ್ತವೆ. ಬ್ಯಾರಿ ಕವನ, ಕಾದಂಬರಿ, ಸಿನಿಮಾ ಬ್ಯಾರಿ ಸಂಸ್ಕೃತಿಯ ಮೇಲೆ ಸಂಶೋಧನ ಲೇಖನಗಳು, ಪ್ರಬಂಧಗಳು, ಕಥೆ ಮತ್ತು ಐತಿಹಾಸಿಕ ವಿಶ್ಲೇಷಣೆ ಒಳಗೊಂಡಿದೆ. ಇಂಗ್ಲಿಷ್ -ಕನ್ನಡ -ಬ್ಯಾರಿ ನಿಘಂಟು ಡಾ.ವಹಾಬ್ ದೊಡ್ಡಮನೆ ನಿರ್ಮಾಣದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿದೆ. ಶಬ್ದಕೋಶ ಸಾಹಿತ್ಯದ ಉತ್ಕ್ರಷ್ಟತೆಗೆ ಮತ್ತು ಬ್ಯಾರಿ ಭಾಷಾ ಬೆಳವಣಿಗೆಗೆ ಸಂಬಂಧಿಸಿದಂತೆ ಬ್ಯಾರಿ ಅಕಾಡಮಿ ವತಿಯಿಂದ ನಿಘಂಟಿನ ರಚನೆ ಮತ್ತು ವ್ಯಾಕರಣ ರಚನೆ ಮೊದಲಾದ ಕೆಲಸಗಳನ್ನು ಹಿರಿಯ ಸಂಶೋಧಕ ಪ್ರೊ.ಬಿ.ಎಮ್.ಇಚ್ಲಂಗೋಡು ಸಂಪಾದಕತ್ವದಲ್ಲಿ ನಡೆಯುತ್ತಿದೆ.

ಜನರಾಡುವ ಭಾಷೆಯಲ್ಲಿ ಭಾಷೆಯ ಸತ್ವ ಅಡಗಿದೆ. ಅದೇ ಭಾಷೆಯ ಜೀವಸತ್ವ ಜನಸಾಮಾನ್ಯರು ವ್ಯಾಕರಣ ಓದದೇ ಭಾಷೆಯನ್ನು ಬಳಸುತ್ತಾರೆ. ಆದರೆ ಒಂದು ಭಾಷೆಯನ್ನು ಕಲಿಯಬೇಕಾದರೆ ಅದಕ್ಕೊಂದು ಅಧಿಕೃತ ಸ್ವರೂಪ ಬೇಕಾಗುತ್ತದೆ. ಈ ಸ್ವರೂಪ ನೀಡಲು ವ್ಯಾಕರಣ, ನಿಘಂಟಿನ ರಚನೆ ಅಗತ್ಯವೂ ಇದೆ. ಉದಾಹರಣೆಗೆ ಇಂಗ್ಲಿಷ್ ಭಾಷೆಯ ಬೆಳವಣಿಗೆಗೆ ಆ ಭಾಷೆಯಲ್ಲಿ ರಚನೆಯಾದ ನಿಘಂಟು ಮತ್ತು ವ್ಯಾಕರಣ ಪ್ರಮುಖ ಕಾರಣವಾಯಿತು. ಈ ತ್ರೀ ಭಾಷಾ ನಿಘಂಟಿನಲ್ಲಿ 30000 ಕ್ಕೂ ಅಧಿಕ ಶಬ್ದಗಳನ್ನು ಒಳಗೊಂಡಿವೆ ಎನ್ನಲಾಗಿದೆ. ಒಟ್ಟಾರೆ ಇಂದು ಆಂಗ್ಲ ಮಾಧ್ಯಮ ಶಿಕ್ಷಣದ ವ್ಯಾಮೋಹದಿಂದ ಕನ್ನಡ ಭಾಷೆ ಮಾತ್ರವಲ್ಲದೆ ಬ್ಯಾರಿ ಭಾಷೆಗೂ ಅಪಾಯವಿದೆ. ಈ ನಿಟ್ಟಿನಲ್ಲಿ ಬ್ಯಾರಿ ಅಕಾಡಮಿ ಹೊರತರುತ್ತಿರುವ ಬ್ಯಾರಿ -ಕನ್ನಡ -ಇಂಗ್ಲಿಷ್ ನಿಘಂಟು ಮೂರು ಭಾಷೆಗಳ ಹಿಡಿತ ಮತ್ತು ಶಬ್ದಜ್ಞಾನದ ವೃದ್ಧಿಗೆ ಪೂರಕ ವಾಗಿರುವ ಶಬ್ದಕೋಶವೂ ಇನ್ನು ಕೆಲವೇ ತಿಂಗಳಲ್ಲಿ ಬಿಡುಗಡೆಗೊಳ್ಳಲಿದೆ.

■ ಅಹಮದ್ ಬಾವ

## ಬದುಕು, ಗ್ರಂಥದಿಂದ ವೈಚಾರಿಕತೆ: ಪ್ರೊ.ಬಿ.ಎ.ವಿವೇಕ್ ರೈ

**ಮಂಗಳಗಂಗೋತ್ರಿ:** ನಮ್ಮಲ್ಲಿ ವೈಚಾರಿಕತೆ ಎನ್ನುವುದು ಬದುಕಿನಿಂದ ಮತ್ತು ಗ್ರಂಥ ದಿಂದ ಬರುವಂತಹದ್ದು, ಅಧ್ಯಾಪನ ವೃತ್ತಿ ಅದೊಂದು ಶಕ್ತಿ ಇದ್ದ ಹಾಗೆ ಎಂದು ಹಂಪಿ ಕನ್ನಡ ವಿ.ವಿ ವಿಶ್ರಾಂತ ಕುಲಪತಿ ಪ್ರೊ.ಬಿ. ಎ.ವಿವೇಕ್ ರೈ ಅವರು ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳ ಸಭಾಂಗಣದಲ್ಲಿ ಇತ್ತೀಚೆಗೆ ಎಸ್.ವಿ.ಪಿ ಕನ್ನಡ ಅಧ್ಯಯನ ಹಳೆ ವಿದ್ಯಾರ್ಥಿಗಳ ಒಕ್ಕೂಟ ಗಿಳಿವಿಂಡು ವತಿಯಿಂದ ನಡೆದ 'ಗಿಳಿವಿಂಡು ಕಲರವ' ಎರಡನೆಯ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ನನ್ನ ಜೀವನದಲ್ಲಿ ಅಧ್ಯಾಪನ ವೃತ್ತಿಯಲ್ಲಿ ತೊಡಗಿಸಿಕೊಂಡ ನಂತರ ಹಲವಾರು ರೀತಿಯ ಸಾಹಿತ್ಯ ಸಂಶೋಧನಾ ಕ್ಷೇತ್ರದಲ್ಲಿ ವಿಸ್ತ-ರಿಸಿಕೊಳ್ಳಲು ಸಾಧ್ಯವಾಯಿತು. ಈ ಅಧ್ಯಾಪನ ವೃತ್ತಿಗೆ ಬರದೇ ಇದ್ದಿದ್ದರೆ ಬೌದ್ಧಿಕವಾಗಿ ನಾನು ಬೆಳೆಯಲು ಖಂಡಿತಾ ಸಾಧ್ಯವಾಗುತ್ತಿರಲಿಲ್ಲ ಎಂದ ಅವರು ಮಂಗಳೂರು ವಿ.ವಿ.ಯಲ್ಲಿ ಕಳೆದ ಅವಿಸ್ಮರಣೀಯ ಕ್ಷಣಗಳನ್ನು ನೆನಪಿಸಿಕೊಂಡರು.

ಸಮಾರಂಭವನ್ನು ಉದ್ಘಾಟಿಸಿ ಮಂಗಳೂರು ವಿ.ವಿ. ಕುಲಪತಿ ಪ್ರೊ.ಕೆ. ಭೈರಪ್ಪ ಮಾತನಾಡಿದರು. ಸಮಾರಂಭದಲ್ಲಿ ಹಾವೇರಿ ವಿ.ವಿ.ಯ ಕುಲಪತಿ ಪ್ರೊ.ಕೆ. ಚಿನ್ನಪ್ಪಗೌಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರೊ. ಬಿ.ಎ. ವಿವೇಕ ರೈ ಅವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಎಸ್.ವಿ.ಪಿ. ಕನ್ನಡ ಅಧ್ಯಯನ ವಿಭಾಗದ 2016-17 ನೇ 'ಬಿತ್ತಿ' ಪತ್ರಿಕೆ ಆವೃತ್ತಿಯನ್ನು ಬಿಡುಗಡೆಗೊಳಿಸಲಾಯಿತು.

# ಜೀವನದ ವಾಸ್ತವಿಕತೆಯನ್ನು ತೋರಿಸಿದ ನೀರ್‌ದೋಸೆ

## ಚಿತ್ರ ವಿಮರ್ಶೆ

ನೀರುದೋಸೆ ಎಂದಾಗ ಮೊದಲು ನೆನಪಾಗುವುದೇ ಕಾಂಟ್ರೋವರ್ಸಿಗಳು. ಅನೇಕ ವಿಚಾರಗಳಿಗೆ ಸುದ್ದಿಯಲ್ಲಿದ್ದ ನೀರುದೋಸೆ ಚಿತ್ರವು ಸೆಪ್ಟೆಂಬರ್‌ನಲ್ಲಿ ತೆರೆಕಂಡಿದೆ. ವಿಜಯ ಪ್ರಸಾದ್ ನಿರ್ದೇಶನದ ಈ ಚಿತ್ರದಲ್ಲಿ ಡಬಲ್ ಮೀನಿಂಗ್ ಸಂಭಾಷಣೆಗಳು ಮುಜುಗರ ಪಡಿಸುವಂತೆ ಇದ್ದರೂ ಅವು ಜೀವನದ ವಾಸ್ತವಿಕತೆಯನ್ನು ತೋರಿಸುತ್ತವೆ. ಮನುಷ್ಯನ ಜೀವನವು ಮುಖವಾಡದ ಬದುಕು ಆಗಿದೆ. ಅದರಲ್ಲಿ ಒಳ್ಳೆಯ ವಿಚಾರಗಳು ಎಲ್ಲರಿಗೂ ಗೋಚರವಾಗುತ್ತದೆ. ಆದರೆ ಅವನ ಇನ್ನೊಂದು ಮುಖವು ಯಾರಲ್ಲೂ ಹೇಳಿಕೊಳ್ಳಲಾಗದ ವಿಚಾರಗಳಿಂದ ತುಂಬಿಕೊಂಡಿರುತ್ತದೆ ಎಂಬುದು ಈ ಚಿತ್ರದ ಆಶಯವಾಗಿದೆ. ಸದಾ ಲೈಂಗಿಕತೆಗಾಗಿ ತಡಕಾಡುವ ಹಿರಿಯ ಜೀವಿ ನಿವೃತ್ತ ಕ್ಲರ್ಕ್ ಬ್ರಹ್ಮಚಾರಿ ದತ್ತಾತ್ರೇಯ (ದತ್ತಣ್ಣ) ವೇಶ್ಯೆಯೊಬ್ಬರ ಬಗ್ಗೆ "ಅವಳ ಮೈ ಮೈಲಿಗೆ ಆದರೆ ಮನಸ್ಸು ಶುದ್ಧ "ಎಂದು ಅವಳ ವ್ಯಕ್ತಿತ್ವ ವನ್ನು ಅಳೆದು ದೊಡ್ಡ ಮಾತುಗಳನ್ನಾಡುತ್ತಾನೆ. ಸದಾ ಡಬಲ್ ಮೀನಿಂಗ್ ಮಾತುಗಳಲ್ಲಿ ಸಂತಸ ಕಾಣುವ ಶವ ಸಾಗಾಣೆ ವಾಹನದ ಚಾಲಕ ಜಗ್ಗು(ಜಗ್ಗೇಶ್) ಮದುವೆಗೆ ಸಿಗದೆ ನರಳುತ್ತಿರುವ ನಡುವಯಸ್ಕ. ಮೂಲಾ ನಕ್ಷತ್ರದಲ್ಲಿ ಜನಿಸಿದ ಕಾರಣದಿಂದ ಗಂಡು ಸಿಗದೆ ಒದ್ದಾಡುತ್ತಿರುವ ಶಾರದಾ (ಸುಮನ್ ರಂಗನಾಥ್) ಜಗ್ಗುವಿನ ಡಬಲ್ ಮೀನಿಂಗ್ ಮಾತುಗಳಿಗೆ ಮನಸೋತು ಮದುವೆಯಾಗಲು ಒಪ್ಪಿದರೂ, ಶವ ಸಾಗಿಸುವ ವಾಹನದ ಚಾಲಕ ಎಂದು ಶಾರದಾಳ ಅಪ್ಪ ಹೆಣ್ಣು ನೀಡಲು ನಿರಾಕರಿಸುತ್ತಾನೆ. ವೇಶ್ಯೆ ಕುಮುದಾಳನ್ನು (ಹರಿಪ್ರಿಯಾ) ಅರಸಿ ದತ್ತಾತ್ರೇಯ ಹಾಗೂ ಜಗ್ಗು ಪೈಪೋಟಿಗೆ ಬಿದ್ದಾಗ ಅವಳಿಗೆ ಬಾಲ್ಯದ ನೆನಪು ಮರುಕಳಿಸಿ ಇಬ್ಬರನ್ನೂ ನಿರಾಕರಿಸುತ್ತಾಳೆ.ಆದರೆ ಈ ಮೂವರು ಒಳ್ಳೆಯ ಗೆಳೆಯರಾಗಿ ಮಾರ್ಪಟ್ಟು ತಮ್ಮ ಹಿಂದಿನ ದುರಂತ ಕಥೆಗಳನ್ನು ಹೇಳಿಕೊಳ್ಳುತ್ತಾ




ಸಮಾಧಾನ ಕಂಡುಕೊಳ್ಳುತ್ತಾರೆ. ಇವರ ಜೊತೆಗೆ ಶಾರದಾ ಕೂಡಾ ಸೇರಿಕೊಳ್ಳುತ್ತಾಳೆ ಹೀಗೆ ಗಟ್ಟಿ ಕಥೆಯಾಗಲಿ ಅಥವಾ ಇರುವ ನಿರೂಪಣೆಗೆ ಒಂದು ಕೇಂದ್ರವಾಗಲಿ ಇರದೇ ಈ ಸಿನಿಮಾದಲ್ಲಿನ ಈ ನಾಲ್ಕು ಮುಖ್ಯ ಪಾತ್ರಗಳು ಹೇಗೆ ಭೇಟಿಯಾಗುತ್ತವೆ ಮತ್ತು ಭೇಟಿಯಾದ ಸಮಯದಲ್ಲಿ ಏನೇನು ವ್ಯವಹರಿಸುತ್ತಾರೆ ಮತ್ತು ತಮ್ಮ ಹಿಂದಿನ ಕಥೆಗಳನ್ನು ಹೇಗೆ ನೆನಪಿಸಿಕೊಳ್ಳುತ್ತಾರೆ ಎಂಬುದಷ್ಟೇ ಪ್ರೇಕ್ಷಕರಿಗೆ ದಕ್ಕುವುದು, ಹಲವಾರು ಬಿಡಿಬಿಡಿ ಘಟನೆಗಳನ್ನು ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲದಂತೆ ಪೋಣಿಸಿದ್ದು, ಕೆಲವೊಮ್ಮೆ ಏನೂ ಸಿಕ್ಕದಿದ್ದಾಗ ಹಿಂದಿನ ದೃಶ್ಯಗಳನ್ನೇ ಪುನರಾವರ್ತಿಸುವ ಮೂಲಕ ಬೇಸರ ಮೂಡಿಸುತ್ತಾರೆ. ಪಾತ್ರಗಳು ತಮ್ಮನ್ನು ಕಂಡುಕೊಳ್ಳಲು ಮಾಡುತ್ತಿರುವ ಆತ್ಮವಿಮರ್ಶೆಯೇ ಅಥವಾ ತಮ್ಮ ಜೀವನವನ್ನು ಸರಿದಾರಿಗೆ ತಂದುಕೊಳ್ಳುವ ತುಡಿತವೇ ಪ್ರೀತಿಯ ಹುಡುಕಾಟವೇ ಇಂತಹ ಪ್ರಶ್ನೆಗಳನ್ನು ಒಂದು ಕ್ಷಣ ಮೂಡಿಸಿದರು ಯಾವುದನ್ನು ನಿಖರವಾಗಿ ಕಟ್ಟಿಕೊಡದೇ ಗೊಂದಲಮಯವಾಗಿಸಿ ಡೈಲಾಗ್‌ಗಳಿಗೆ ಶಿಳ್ಳೆ ಹೊಡೆಯುತ್ತಾ ಚಪ್ಪಾಳೆ ತಟ್ಟುತ್ತಾ ಎದ್ದು ನಡೆಯುತ್ತಿರಿ ಎನ್ನುವಂತಿದೆ.

ತಾಂತ್ರಿಕವಾಗಿ ಸಿನೆಮಾ ಉತ್ತಮವಾಗಿ ಮೂಡಿಬಂದಿದ್ದು, ಸುಜ್ಞಾನ್ ಅವರ ಛಾಯಾಗ್ರಹಣ ಹಾಗು ಸುರೇಶ ಅರಸ್ ಅವರ ಸಂಕಲನ ಎಂದಿನಂತೆ ಪೂರಕ ಸಹಕಾರ ನೀಡಿವೆ, ಅನೂಪ್ ಸೀಳಿನ್ ಸಂಗೀತದ ಹಾಡುಗಳು ಸಾಂದರ್ಭಿಕವಾಗಿವೆ. ಜಗ್ಗೇಶ್ ತಮ್ಮ ಎಂದಿನ ನಟನೆಯಿಂದ ಮ್ಯಾನರಿಸಂನಿಂದ ಅವರ ಅಭಿಮಾನಿಗಳ ಹರ್ಷೋದ್ಗಾರಕ್ಕೆ ಕಾರಣರಾಗುತ್ತಾರೆ. ಸಿದ್ಲಿಂಗು ನಂತಹ ಒಳ್ಳೆಯ ಕಥೆಯಿದ್ದ ಸಿನಿಮಾ ವನ್ನು ನೀಡಿದ್ದ ವಿಜಯ್‌ಪ್ರಸಾದ್ ಪ್ರಸಕ್ತ ಯೋಜನೆಯಲ್ಲಿ ಆದ ಹಲವಾರು ಬದಲಾವಣೆಗಳಿಂದಲೋ ಏನೋ ನಿರ್ದಿಷ್ಟ ಚಿತ್ರಕಥೆ ಇಲ್ಲದೆ, ಸೆಟ್‌ನಲ್ಲಿಯೇ ಕಥೆ ಕಟ್ಟಿರುವಂತೆ ಗ್ರಾಸವಾಗುತ್ತಿದೆ. ಇಲ್ಲಿ ನಿರ್ದೇಶಕರು ಅತಿರೇಕದ ವಿರೂಪದ ವಿಜೃಂಭಣೆಗೆ ಮೊರೆ ಹೋಗಿ ತಾವು ನಿರೂಪಿಸಿದ್ದ ಸಾಮರ್ಥ್ಯದಿಂದ ಹಿಂಬಡ್ತಿ ಪಡೆದವರಂತೆ ಕಂಡು ನಿರಾಸೆ ಮೂಡಿಸುತ್ತಾರೆ. ಜಗ್ಗು ಮತ್ತು ದತ್ತಾತ್ರೇಯ ಪಾತ್ರಗಳ ಹೆಡ್ಡತನಗಳು, ದುರುಳ ಚಿಂತನೆಗಳು ಭಾರಿ ತಾತ್ವಿಕತೆಯಂತೆ ಚಿತ್ರಿಕರಿಸುವ ನಿರ್ದೇಶಕ. ಕುಮುದಾ ವಿದ್ಯಾರ್ಥಿಯಾಗಿದ್ದಾಗ ಇಬ್ಬರು ಸಹ ವಿದ್ಯಾರ್ಥಿಗಳೊಡನೆ ನಡೆದಿದ್ದ ಒಂದು ಹುಡುಗಾಟದ ಪ್ರಸಂಗ ಅಥವಾ ಅವಳ ನೈಜಭಾವನೆಯನ್ನು ಅಪರಾಧವೋ ಪಾಪವೋ ಎಂಬಂತೆ ನಿರೂಪಿಸಿಬಿಡುತ್ತಾರೆ. ಜಗ್ಗು ಪಾತ್ರದ ತಾಯಿ ಮತ್ತೊಬ್ಬನ ಜೊತೆ ಓಡಿ ಹೋಗುವುದನ್ನು ದೇವರು ಮಾಡಿದ ತಪ್ಪು ಎಂದು ಬಣ್ಣಿಸುವ ಜಗ್ಗು ತನ್ನ ತಂದೆಯ ವಿವಾಹದಾಚೆಗಿನ ಸಂಬಂಧವನ್ನು ವಿಜೃಂಭಿಸುತ್ತಾನೆ ಇಂತಹ ಘಟನೆಗಳನ್ನು ಕಟ್ಟಿಕೊಡುವಾಗ ಸಿನೆಮಾ ನಿರ್ದೇಶಕರುಗಳು ಪುರುಷ ಪಾತ್ರಕ್ಕೆ ತಮ್ಮನ್ನು ಬಲಿಗೊಡದೆ ವಿಶಾಲ ಚಿಂತನೆಯಿಂದ ಕಥೆ ಯನ್ನು ದೃಶ್ಯಗಳನ್ನು ಕಟ್ಟಿಕೊಟ್ಟಾಗ ಅದನ್ನು ಸ್ವೀಕರಿಸುವ ಮನಸ್ಸುಗಳು ವಿಶಾಲವಾಗುತ್ತದೆ ಹಾಗೂ ಪ್ರೇಕ್ಷಕರ ಸಂಖ್ಯೆಯೂ ಕೂಡ ಹೆಚ್ಚಾಗುತ್ತದೆ.

■ **ಕೌಶಿಕ್ ಎ.ಎಸ್**

# ಕರಾವಳಿಯಲ್ಲಿ ನರ್ತೆ ವಿಶೇಷತೆ

ಪೃಥ್ವಿಯ ಪ್ರಾಣಿ ಸಾಮ್ರಾಜ್ಯದಲ್ಲಿ ಬೆನ್ನೆಲುಬುಗಳಿಲ್ಲದ ಪ್ರಾಣಿಗಳ ಪ್ರಧಾನ ವರ್ಗ ಮೃದ್ವಂಗಿಗಳದು. ಹೆಸರೇ ಸೂಚಿಸುವಂತೆ ಈ ವರ್ಗದ ಪ್ರಾಣಿಗಳದು ಮೆತ್ತನೆಯ ಮುದ್ದೆಯಂತಹ ಶರೀರ, ಅಸ್ಥಿಪಂಜರ ರಹಿತ ದೇಹ ನಿರ್ಮಿತಿ. ತಮ್ಮ ಇಡೀ ಶರೀರವನ್ನು ಆವರಿಸುವಂತೆ, ತಮ್ಮ ಶರೀರ ರಕ್ಷಣೆಗೂ ಆಹಾರ ಗಳಿಕೆಗೂ, ಚಲನಶೀಲತೆಗೂ ಒಪ್ಪವಾಗುವಂತೆ ಗಟ್ಟಿಯಾದ ಬಾಹ್ಯ ಕವಚವೊಂದು ರಚನೆಗೊಂಡಿರುತ್ತದೆ. ಇವು ಚಿಪ್ಪಿನೊಳಗೆ ಬದುಕುತ್ತವೆ. ಹೀಗೆ ಬೇಸಿಗೆಯಲ್ಲಿ ಮಣ್ಣಿನಡಿಯಲ್ಲಿ ಮಾಯವಾಗಿ, ಮುಂಗಾರು ಮಳೆ ಪ್ರಾರಂಭವಾಗಿ, ಗದ್ದೆಗಳಲ್ಲಿ ನೀರು ನಿಲ್ಲುತ್ತಿದ್ದಂತೆ. ಮಣ್ಣು ಮೆದುವಾಗತೊಡಗುತ್ತದೆ. ಆಗ ಮೆಲ್ಲಗೆ ಮಣ್ಣಿನಿಂದ ಹೊರಬಂದು, ಒಂದು ಕಡೆಯಿಂದ ಇನ್ನೊಂದು ಕಡೆಗೆ ನೀರಿನ ಹರಿವಿನೊಂದಿಗೆ ಸಂಚರಿಸಲು ಶುರು ಮಾಡುವುದೇ ಸುಂದರ ಮೃದ್ವಂಗಿ ನರ್ತೆ. ಕರಾವಳಿಯ ಆಡುಭಾಷೆ ತುಳುವಿನಲ್ಲಿ ಇದು ನರ್ತೆ ಎಂದೇ ಚಿರಪರಿಚಿತ. ಗಾತ್ರದಲ್ಲಿ ತುಂಬಾ ಚಿಕ್ಕದಿದ್ದರೆ ಅವುಗಳನ್ನು ಗುಳ್ಳ ಎಂದು ಕರೆಯುತ್ತಾರೆ.

ಸಾಮಾನ್ಯವಾಗಿ ಹೊಲ ಗದ್ದೆಗಳಲ್ಲಿ, ಗದ್ದೆ ಬದುಗಳಲ್ಲಿ, ಹಾಗೂ ನೀರಿನ ಚಿಕ್ಕ ಕಣಿವೆಗಳ ಬದಿಯಲ್ಲಿ ಮಾತ್ರ ಕಾಣಸಿಗುವ ನರ್ತೆಗಳಿಗೆ ಎಲೆ, ಕೆಸರು, ಮಣ್ಣು, ಪಾಚಿಗಳೇ ಆಹಾರ. ಹುಲ್ಲು ತೋಪುಗಳಲ್ಲಿ ಅಂಟಿಕೊಂಡು, ನಿಧಾನವಾಗಿ, ತನ್ನ ಅಂಟು ದೇಹಕ್ಕೆ ರಕ್ಷಣಾ ಕವಚವನ್ನು ಸುತ್ತಿಕೊಂಡು ಸಾಗುವ ಇವು, ಮಳೆಗಾಲದಲ್ಲಿ ಮಾತ್ರ ಕಾಣಸಿಗುವ ಆಕರ್ಷಣೀಯ ಮೃದ್ವಂಗಿ. ಆದರೀಗ ಮಳೆಗಾಲದಲ್ಲಿಯೂ ಅಪರೂಪದ ಜೀವಿಯಾಗಿ ಬಿಟ್ಟಿವೆ ಇವುಗಳು.

ಹಟ್ಟಿ ಗೊಬ್ಬರ ಹಾಕುತ್ತಿದ್ದ ಒಂದು ಕಾಲದಲ್ಲಿ ಧಾರಾಳವಾಗಿ ಸಿಗುತ್ತಿದ್ದ ನರ್ತೆ, ಈಗ ರಾಸಾಯನಿಕ ಗೊಬ್ಬರಗಳನ್ನು ಬಳಕೆ ಮಾಡುವುದರಿಂದ ಅದರ ಸಂತತಿ ಅಳಿವಿನಂಚಿನಲ್ಲಿದೆ. ಇಷ್ಟೇ ಅಲ್ಲದೆ ಅವುಗಳು ಭೂಮಿ ಮೇಲೆ ಬಂದು ಸಂತಾನಭಿವೃದ್ಧಿ ಮಾಡುವ ಅವಧಿಯಲ್ಲೇ ಅವುಗಳನ್ನು ಹಿಡಿದು, ಜನರು ಆಹಾರವಾಗಿ ಬಳಸುವುದರಿಂದ ಹಾಗೂ ಗದ್ದೆಗಳೇ ಮಾಯವಾಗುತ್ತಿರುವ ಇತ್ತೀಚಿನ ದಿನಗಳಲ್ಲಿ ನರ್ತೆ ಅಪರೂಪದ ಅತಿಥಿಯಾಗಿ ಪರಿಣಮಿಸಿದೆ.

ಗದ್ದೆಯಲ್ಲಿರುವ ಕ್ರಿಮಿಕೀಟಗಳನ್ನು ತಿಂದು ಬದುಕುವ ಇವುಗಳು ಮಣ್ಣಿನ ಒಳಗೂ ಕ್ರಿಯಾಶೀಲವಾಗಿರುವುದರಿಂದ ರೈತನಿಗೆ ತುಂಬಾ ಸಹಕಾರಿಯಾಗಿದ್ದವು. ಹಾಗಾಗಿ ಇವುಗಳನ್ನು ಗದ್ದೆಯಲ್ಲಿ ಬಿಟ್ಟು ಬೆಳೆಸುತ್ತಿದ್ದರು. ಹೀಗೆ ಪರೋಕ್ಷವಾಗಿ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿ, ಉತ್ತಮ ಬೆಳೆ ಬರುವಲ್ಲಿ ಇದೂ ಒಂದು ಕಾರಣವಾಗುತ್ತಿತ್ತು. ಆದ್ದರಿಂದ ನರ್ತೆಯನ್ನು ರೈತನ ಮಿತ್ರ ಎಂದೇ



ಕರೆಯುತ್ತಿದ್ದರು. ಆದರೆ ಇದು ರೈತನಿಗೆ ಶತ್ರುವೂ ಹೌದು. ಯಾಕೆಂದು ಕೇಳುತ್ತೀರಾ? ನರ್ತೆ ಇರುವ ಗದ್ದೆಯಲ್ಲಿ ಬೀಜ ಬಿತ್ತನೆ ಮಾಡಿ, ಮೊಳಕೆಯೊಡೆಯುತ್ತಿದ್ದಂತೆ ನರ್ತೆಗಳು ಮೊಳಕೆ ತಿನ್ನಲು ಶುರು ಮಾಡಿ ಬೆಳೆ ನಾಶಮಾಡುತ್ತವೆ. ಹೀಗಾಗಿ ಹೆಚ್ಚಿನ ಭಾಗಗಳಲ್ಲಿ ಉಳುಮೆ ಸಮಯದಲ್ಲಿಯೇ ನರ್ತೆಗಳನ್ನು ಗದ್ದೆಯಿಂದ ತೆಗೆದು ಹೊರಹಾಕಿ, ನಂತರ ಬಿತ್ತನೆ ಮಾಡುತ್ತಾರೆ. ಇಲ್ಲದಿದ್ದಲ್ಲಿ ನರ್ತೆ ಇರುವ ಗದ್ದೆಯಲ್ಲಿ ಹೆಚ್ಚಾಗಿ ನೇಜಿ ನೆಡುವುದನ್ನೇ ರೂಢಿಸಿಕೊಂಡಿರುತ್ತಾರೆ. ಈ ನರ್ತೆ 15 ರಿಂದ 20 ವರ್ಷಗಳವರೆಗೆ ಬದುಕಬಲ್ಲದ್ದಾಗಿದ್ದು, ನೀರಿನಿಂದ ಬೇರ್ಪಡಿಸಿದ ಎರಡು ಮೂರು ದಿನಗಳವರೆಗೆ ಮಾತ್ರವೇ ಜೀವಂತವಾಗಿರುತ್ತವೆ. ಈಗ ಗದ್ದೆ ಉಳುಮೆಗೆ ರೈತರು ಯಂತ್ರೋಪಕರಣಗಳನ್ನು ಅವಲಂಭಿಸಿರುವುದರಿಂದ, ಒಂದು ರೀತಿಯಲ್ಲಿ ರೈತರೇ ಇದರ ಅವನತಿಗೆ ಕಾರಣರಾಗಿದ್ದಾರೆ ಎನ್ನಬಹುದು.

ಬೆಳ್ಳಂಬೆಳಗ್ಗಿನ ಹೊತ್ತಲ್ಲೇ ಹೆಚ್ಚಿನವರು ನರ್ತೆಗಳನ್ನರಸಿ ಗದ್ದೆಗಿಳಿಯುತ್ತಾರೆ. ಆರಾಮವಾಗಿ ಚಿಪ್ಪಿನೊಳಗಿಂದ ತನ್ನ ದೇಹವನ್ನು ಹೊರಹಾಕಿ ವಿರಮಿಸುತ್ತಾ ವಿಹಾರ ಮಾಡುತ್ತಿರುವ ನರ್ತೆಗಳಿಗೆ ಮಾನವನ ಸುಳಿವು ಬೇಗನೆ ತಿಳಿಯುತ್ತದೆ. ನೀರಿನಲ್ಲಾಗುವ ಶಬ್ಧ ಮತ್ತು ಬೇರೆ ವಸ್ತುಗಳಿಂದ ಅಥವಾ ಕೈಗಳಿಂದ ಅವುಗಳನ್ನು ಸ್ಪರ್ಶಿಸುತ್ತಿದ್ದಂತೆ, ಬಸವನಹುಳು, ಸಹಸ್ರಪದಿಗಳಂತೆ ಇವುಗಳೂ ನಾಚಿಕೆಯಿಂದಲೋ, ಜೀವ ಭಯದಿಂದಲೋ ತಕ್ಷಣ ದೇಹವನ್ನು ತನ್ನ ಗಟ್ಟಿಯಾದ ಶಂಖಾಕೃತಿಯ ಚಿಪ್ಪಿನೊಳಗೆ ಹಾಕಿ ಮುಚ್ಚಳದಿಂದ ಗಟ್ಟಿಯಾಗಿ ಮುಚ್ಚಿಕೊಂಡು ಸ್ತಬ್ಧವಾಗಿ ಬಿಡುತ್ತವೆ. ತನ್ನ ದೇಹವನ್ನು ಮಾತ್ರವೇ ರಕ್ಷಾ ಕವಚದೊಳಗೆ ಭದ್ರ ಮಾಡಿಕೊಳ್ಳುತ್ತವೆಯೇ ಹೊರತಾಗಿ ಮನುಷ್ಯನಿಂದ ತಪ್ಪಿಸಿಕೊಂಡು ತಕ್ಷಣ ಮಣ್ಣಿನೊಳಗೆ ಸೇರಿಕೊಳ್ಳುವ ಸಾಮರ್ಥ್ಯ ನರ್ತೆಗಳಿಗಿಲ್ಲ. ನೀರಿನಲ್ಲಿ ಮತ್ತು ಮಣ್ಣಿನೊಳಗೂ ಜೀವಿಸಬಲ್ಲ ಇದೊಂದು ಉಭಯವಾಸಿ ಪ್ರಾಣಿ.

ಹಿಂದಿನ ಕಾಲದಲ್ಲಿ ಕರಾವಳಿ ಭಾಗದ ಕೆಲವೆಡೆ ಮಳೆಗಾಲದ ಸಮಯದಲ್ಲಿ ಹೆಚ್ಚಿನ ಮನೆಗಳಲ್ಲಿ ದಿನನಿತ್ಯದ ವಿಶೇಷ ಆಹಾರ ಇದಾಗಿತ್ತು. ಇಂದಿಗೂ ನರ್ತೆಯ ರುಚಿ ಬಲ್ಲ ಕೆಲವರು ನರ್ತೆ ಹುಡುಕಾಟಕ್ಕಿಳಿಯುತ್ತಾರೆ. ಇವುಗಳನ್ನು ಹುಡುಕುವುದು ಸುಲಭದ ಮಾತಲ್ಲ. ಕೆಸರೇ ಆಹಾರವಾಗಿರುವ ಇದನ್ನು ಗದ್ದೆಯಿಂದ ಆಯ್ದ ತಕ್ಷಣ ಆಹಾರವಾಗಿ ಉಪಯೋಗಿಸಲು ಸಾಧ್ಯವಿಲ್ಲ.

ಆಯ್ದ ನರ್ತೆಗಳನ್ನು ಒಂದು ಪಾತ್ರದಲ್ಲಿ ಹಾಕಿ, ನೀರನ್ನು ಹಾಕಿ ಮುಚ್ಚಳದಿಂದ ಎರಡು ದಿನಗಳವರೆಗೆ ಹಾಗೇ ಬಿಡಬೇಕು. ಎರಡು ದಿನದಲ್ಲಿ ನರ್ತೆಯೊಳಗಿದ್ದ ಕೆಸರು, ಪಾಚಿ ಬೇರ್ಪಟ್ಟಿರುವುದನ್ನು ಕಾಣಬಹುದು. ನಂತರ ಇದನ್ನು ಶುಚಿಗೊಳಿಸಿ ಖಾದ್ಯದಲ್ಲಿ ಬಳಸುವುದು ವಾಡಿಕೆ. ಖಾಲಿ ನೀರಿನಲ್ಲಿ ಬೇಯಿಸಿದಾಗ ಚಿಪ್ಪಿನ ಮುಚ್ಚಳ ಸುಲಭವಾಗಿ ತೆಗೆಯಲು ಸಾಧ್ಯ. ಚಿಪ್ಪಿನೊಳಗಿಂದ ಮಾಂಸವನ್ನು ತೆಗೆದು ಅಥವಾ ಚಿಪ್ಪಿನೊಂದಿಗೆ ನರ್ತೆಯನ್ನು ವಿವಿಧ ಖಾದ್ಯಗಳಲ್ಲಿ ಬಳಸಬಹುದು. ಇಂದಿಗೂ ಕರಾವಳಿ ಭಾಗದಲ್ಲಿ ನರ್ತೆಯಿಂದ ಬಗೆ ಬಗೆಯ ರುಚಿ ರುಚಿಯಾದ ಖಾದ್ಯಗಳನ್ನು ಮಾಡುವವರಿದ್ದಾರೆ. ಇದೊಂದು ಮಳೆಗಾಲದ ಒಳ್ಳೆಯ ಆಹಾರವೂ ಹೌದು. ಸೌತೆನರ್ತೆ, ಬಸಲೆನರ್ತೆ, ನರ್ತೆಪುಂಡಿ, ನರ್ತೆಗಸಿ ಇತ್ಯಾದಿಗಳಿಂದ ನರ್ತೆ ಇಂದಿಗೂ ಜನರ ಬಾಯಲ್ಲಿ ನೀರೂರಿಸುತ್ತದೆ. ಇದರ ರುಚಿ ತಿಂದವನೇ ಬಲ್ಲ. ನರ್ತೆ ಖಾದ್ಯ ರುಚಿಕರ ಮಾತ್ರವಲ್ಲದೆ ಆರೋಗ್ಯಕರವೂ ಹೌದು. ನರ್ತೆಯ ಖಾದ್ಯ ಸೊಂಟನೋವು, ಬೆನ್ನುನೋವು, ಮುಂತಾದ ನೋವುಗಳಿಗೆ ಸಿದ್ಧೌಷಧ ಎನ್ನುವುದು ಹಳ್ಳಿಗರ ನಂಬಿಕೆ. ಹಳ್ಳಿ ಪ್ರದೇಶದಲ್ಲಿ ಸಾಮಾನ್ಯವೆನಿಸಿಕೊಂಡಿರುವ ನರ್ತೆ, ಪೇಟೆಗಳಲ್ಲಿ ಬಲು ಬೇಡಿಕೆಯನ್ನು ಉಳಿಸಿಕೊಂಡಿದೆ. ಹಳ್ಳಿಯ ಕೆಲ ಮಹಿಳೆಯರು ಮಳೆಗಾಲದಲ್ಲಿ ನರ್ತೆಗಳನ್ನು ಹಿಡಿದು ಮಾರಾಟ ಮಾಡುವುದನ್ನು ಒಂದು ಉದ್ಯೋಗ ಮಾಡಿಕೊಂಡಿದ್ದಾರೆ.

ಗದ್ದೆ ಬದುಗಳಲ್ಲಿ ಬೆಳೆದ ಹುಲ್ಲುಗಳ ಎಡೆಯಲ್ಲಿ, ಬಿಲಗಳಲ್ಲಿ ರಾಶಿ ರಾಶಿ ಮೊಟ್ಟೆಗಳನ್ನಿಟ್ಟು ತನ್ನ ಸಂತತಿಯನ್ನು ಬೆಳೆಸತೊಡಗುತ್ತದೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಮೊಟ್ಟೆಗಳ ಗುಂಪು, ನೀರಿನಲ್ಲಿ ಕೊಚ್ಚಿ ಹೋಗುತ್ತವೆ. ಇವು ಸುಮಾರು 200 ರಿಂದ 300 ಮೊಟ್ಟೆಗಳನ್ನಿಟ್ಟು ಸಂತತಿಯನ್ನು ವೃದ್ಧಿಸುತ್ತವೆ.

ನರ್ತೆಯನ್ನು ತಿಂದ ನಂತರ ಚಿಪ್ಪನ್ನು ಎಸೆಯುವ ಬದಲು ಅದರಿಂದ ಕಲಾತ್ಮಕ ಚಿತ್ರಗಳನ್ನು ಬರೆಯಬಹುದು. ಚಿಪ್ಪುಗಳನ್ನು ಪೋಣಿಸಿ ಉದ್ದನೆಯ ಹಾರಗಳಾಗಿ ಮಾಡುತ್ತಾರೆ. ಚಿಪ್ಪಿನ ಮುಚ್ಚಳದಿಂದ ವಿವಿಧಾಕೃತಿಗಳನ್ನು ಬರೆದು ಅಲಂಕಾರಿಕ ವಸ್ತುಗಳಾಗಿ ಉಪಯೋಗಿಸಬಹುದು. ಇವುಗಳು ನೋಡಲು ತುಂಬಾ ಆಕರ್ಷಣೀಯವಾಗಿರುವುದು. ಜೊತೆಗೆ ಮನೆಯ ಅಂದವನ್ನೂ ಹೆಚ್ಚಿಸುತ್ತವೆ.

■ **ಮೇಘಲಕ್ಷ್ಮಿ ಮರುವಾಳ**

**ವಿದ್ಯಾರ್ಥಿ ಸಂಪಾದಕರು**

**ಮುಹಮ್ಮದ್ ನವಾಫ್**
**ಕೌಶಿಕ್ ಎ.ಎಸ್**
**ಅಭಿಷೇಕ್ ಹೆಚ್.ಎಸ್**
**ದಿವ್ಯಾ. ಪಿ**
**ರಂಜಿನಿ**
**ಶಿಲ್ಪಾ ಜೆ. ಆಚಾರ್ಯ**

ಸಂಪಾದಕರು ಹಾಗೂ ಪ್ರಕಾಶಕರು: ಪ್ರೊ. ವಹೀದಾ ಸುಲ್ತಾನ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574199 ದ.ಕ, ಕಾರ್ಯಕಾರಿ ಸಂಪಾದಕರು: ಪ್ರೊ. ಜಿ. ಪಿ. ಶಿವರಾಂ. ಮುದ್ರಕರು: ನೆಡ್ ಪ್ರಿಂಟ್, ಯೆಯ್ಯಾಡಿ ಮಂಗಳೂರು–575008